www.divinegen.org
www.dgmbethelchurch.org

ದೇವರ ಸ್ವರ
ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ-09 ಸಂಚಿಕೆ-03 ಮಾರ್ಚ್ 2015
Volume : IX Issue : 03 March 2015

Editor, Publisher, Printer
& Owned by :
**Sunil John D'souza**
S/o. Late Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

ಒಳ ಪುಟಗಳಲ್ಲಿ

1. ಪ್ರಕಟಣೆ
2. ನೂತನ ವರುಷದಲ್ಲಿ ಅತ್ಯುತಮ್ಮ ಹೆಜ್ಜೆಯಲ್ಲಿ ಮುನ್ನಡೆಯೋಣ
3. ಪಾಪದಿಂದ ಬಂದ ಶಾಪ!
4. ಸ್ಥಳೀಯ ಮತ್ತು ವಿದೇಶ ಸುದ್ಧಿ
5. ಆರೋಗ್ಯ ಸ್ವರ
6. ನೀತಿವಂತನ ಆಶೀರ್ವಾದಗಳು
6. ಜಯದ ಜೀವಿತ
7. ಮಹಿಳೆಯರ ಸ್ವರ
8. ಮಕ್ಕಳ ಸ್ವರ

# ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧ ನಾಮದಲ್ಲಿ ಕ್ರಿಸ್ತನಲ್ಲಿ ಪ್ರಿಯ ಸಹೋದರ/ ಸಹೋದರಿಯರಿಗೆ ನನ್ನ ಆತ್ಮೀಯ ವಂದನೆಗಳು.

ದಿನಗಳು ವೇಗವಾಗಿ ಹೋಗುತ್ತಾ ಇವೆ. ಇನ್ನು ಸುವಾರ್ತೆ ಕೇಳದೆ ಇರುವ ಅನೇಕ ಹಳ್ಳಿಗಳು, ಪಟ್ಟಣಗಳು ಇವೆ. ದೇವಜನರಿಗೆ ಸುವಾರ್ತೆ ಸಾರುವ ದೊಡ್ಡ ಜವಾಬ್ದಾರಿ ನಮ್ಮ ಮೇಲೆ ಇದೆ. "ಯೆಹೋವನು ನೇಮಿಸಿದ ಕೆಲಸದಲ್ಲಿ ಅಲಸ್ಯಗಾರನು ಶಾಪಗ್ರಸ್ತನಾಗಲಿ; ತನ್ನ ಕತ್ತಿಯನ್ನು ರಕ್ತಸುರಿಸದಂತೆ ತಡೆಯುವವನಿಗೆ ಶಾಪ ತಗಲಲಿ" (ಯೆರೆ. 48:10). ಅದಷ್ಟು ವೇಗವಾಗಿ ಸೇವೆಯಲ್ಲಿ ನಾವು ಮುಂದುವರಿಯೋಣ. ಯೋಹಾ. 4:35ರ ಪ್ರಕಾರ "ನನ್ನನ್ನು ಕಳುಹಿಸಿದಾತನ ಚಿತ್ತದಂತೆ ಮಾಡಿ ಆತನ ಕೆಲಸವನ್ನು ಪೂರೈಸುವದೇ ನನ್ನ ಆಹಾರವು" ಯೇಸುಕ್ರಿಸ್ತನಿಗೆ ಒಂದು ದರ್ಶನವಿತ್ತು. ನಾವು ಸೇವೆ ಮಾಡಿ ಅದಷ್ಟು ಜನರಿಗೆ ಸುವಾರ್ತೆ ಸಾರಿ ರಕ್ಷಣೆ ಮಾರ್ಗಕ್ಕೆ ನಡೆಸುವವರಾಗಿರೋಣ. ಮತ್ತಾ. 28:18-20ರಲ್ಲಿ "ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ". ಯೇಸುಕ್ರಿಸ್ತನು ಕ್ರೈಸ್ತ ಸಭೆಗೆ ಕೊಟ್ಟಂತಹ ಜವಾಬ್ದಾರಿಯನ್ನು ಗಂಭೀರವಾಗಿ ತೆಗೆದುಕೊಂಡು ಸಂತೋಷವಾಗಿ ನಿಭಾಯಿಸೋಣ. "ಆದದರಿಂದ, ನನ್ನ ಪ್ರಿಯ ಸಹೋದರರೇ, ಸ್ಥಿರಚಿತ್ತರಾಗಿಯೂ ನಿಶ್ಚಲರಾಗಿಯೂ ಇರ್ರಿ. ನೀವು ಕರ್ತನ ಸೇವೆಯಲ್ಲಿ ಪಡುವ ಪ್ರಯಾಸವು ನಿಷ್ಫಲವಾಗುವದಿಲ್ಲವೆಂದು ತಿಳಿದು ಕರ್ತನ ಕೆಲಸವನ್ನು ಯಾವಾಗಲೂ ಅತ್ಯಾಸಕ್ತಿಯಿಂದ ಮಾಡುವವರಾಗಿರಿ" (1 ಕೊರಿ. 15:58). ಈ ಲೋಕದಲ್ಲಿ ನಾವು ಮಾಡುವ ಸೇವೆಗೆ ಕರ್ತನು ಪರಲೋಕದಲ್ಲಿ ಪ್ರತಿಫಲವನ್ನು ಇಟ್ಟಿದ್ದಾನೆ. ಅದಕ್ಕಾಗಿ ಕರ್ತನು ನಿಮ್ಮೆಲ್ಲರನ್ನು ಮಾರ್ಗದರ್ಶನ ಮಾಡಿ ಮುನ್ನಡೆಸಲಿ.

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕರು

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**ಥುವತೈರ ಸಭೆ**

ಥುವತೈರ ಅಂದರೆ ನಿರಂತರ ಬಲಿ (ಸುಗಂಧ ಯಜ್ಞ) ಸಭಾಕಾಲ :– ಕ್ರಿ.ಶ 800 ರಿಂದ 1517 ಸಾಮ್ಯ ಹುಳಿಹಿಟ್ಟು.

**ಥುವತೈರ ಪಟ್ಟಣ** :– ಪೆರ್ಗಮ ಪಟ್ಟಣದಿಂದ 20 ಮೈಲಿ ಪೂರ್ವಕ್ಕೆ ಇರುವ ಪಟ್ಟಣವಾಗಿದೆ. ಇದೊಂದು ಸೈನಿಕ ಕೇಂದ್ರ ಮತ್ತು ರೇಷ್ಮೆ ವ್ಯವಸಾಯಕ್ಕೆ ಪ್ರಸಿದ್ಧವಾಗಿತ್ತು. ಅ.ಕೃ. 16:14 ವಚನದ ಲೂದ್ಯಳ ಜನ್ಮ ಸ್ಥಳವಾಗಿತ್ತು. ವ್ಯವಸಾಯ ಕೇಂದ್ರವಾದದ್ದರಿಂದ ವಂಚನೆಗೆ ಪ್ರಸಿದ್ಧ ಸ್ಥಳವಾಗಿತ್ತು. ಸೂರ್ಯ ದೇವನಿಗಾಗಿ ದೇವಾಲಯವಿದ್ದುದರಿಂದ ಅಸನ್ಮಾರ್ಗಿಕತೆ ಹೆಚ್ಚು ಇತ್ತು. ಕಷ್ಟ ಪ್ರವಾದಿಗಳು, ದುರುಪದೇಶಕರು ಹೆಚ್ಚಿದ ಕಾಲ ಆದ್ದರಿಂದಲೇ ದೇವಕುಮಾರನು ಎಂದು ಹೇಳಿರುವುದು. ಇದು ಸಣ್ಣ ಪಟ್ಟಣ ಆದರೆ ಇದಕ್ಕೆ ದೊಡ್ಡ ಸಂದೇಶವನ್ನು ಕರ್ತನು ಕೊಡುತ್ತಿದ್ದಾನೆ. ಈ ಪಟ್ಟಣದ ಇಂದಿನ ಹೆಸರು "ಅಕ್‌ಹಿಸ್ಸಾರ್" ತುರ್ಕಿಗಳು ಹಳೆಯ ಪಟ್ಟಣಗಳನ್ನೆಲ್ಲಾ ನಾಶಮಾಡಿದರು. ತುರ್ಕಿಗಳು, ಹರ್ಮೆನಿಯನ್ನರು, ಕೆಲವು ಕ್ರೈಸ್ತರು ಇಲ್ಲಿ ವಾಸವಾಗಿದ್ದಾರೆ. ಆರ್ಥಿಕವಾಗಿ ದೊಡ್ಡ ಸಮಸ್ಯೆ ಇದ್ದು, ಮಾನಸಾಂತರ ಹೊಂದದ್ದು ಕಾರಣವಾಗಿದೆ. ಆರಂಭದ ಮೂರು (3) ಸಭೆಗಳಲ್ಲಿ ಬರೋಣದ ಕುರಿತು ಏನೂ ಹೇಳಲಿಲ್ಲ. ನ್ಯಾಯತೀರ್ಪಿನ ಕುರಿತು ಮಾತ್ರ ಹೇಳಿದೆ. ಆದರೆ ನಂತರ 4 ಸಭೆಗಳಿಗೆ ಕರ್ತನ ಬರೋಣ ಕುರಿತು ಹೇಳಿದೆ. ಅದರಲ್ಲಿ ಮೊದಲನೆಯ ಸಭೆ ಥುವತೈರವಾಗಿದೆ. (ಪ್ರಕ. 2:25, 3:5, 3:11, 3:20). ದುರುಪದೇಶ ಸಭೆಯಲ್ಲಿ ಆರಂಭವಾದ ಸಭಾಕಾಲವಾಗಿದೆ. ಸಭೆ ಬೆಳೆಯಿತು. 8ನೇ ಶತಮಾನವಾದ ಥುವತೈರ ಸಭಾಕಾಲದಿಂದ ಅನೇಕ ಉಪದೇಶಗಳು ಆರಂಭವಾಯಿತು, ತಂದೆಯಾದ ದೇವರು, ಮಗನಾದ ದೇವರು, ಪವಿತ್ರಾತ್ಮ ದೇವರು ಎಂಬಿತ್ಯಾದಿ ವಿಷಯಗಳು ಸುದೀರ್ಘ ಚರ್ಚೆಗೊಳಗಾಯಿತು.

**ಅಂಗೀಕಾರ :** 1) ನಿನ್ನ ಕೃತ್ಯ 2) ನಂಬಿಕೆ 3) ಪರೋಪಕಾರ 4) ತಾಳ್ಮೆ 5) ಕಡೇ ಕೃತ್ಯಗಳು ಮೊದಲಿಗಿಂತ ಉತ್ತಮ 6) ಪ್ರೀತಿ ಯಾವುದೇ ಪುಣ್ಯ ಕ್ರಿಯೆಗಳಿಂದ ಪಾಪ ವಿಮೋಚನೆ ಇಲ್ಲ (ಎಫೆ. 2:8).

**ಈಜೆಬೆಲ್ ಎಂಬ** ಸ್ತ್ರೀ : ಒಬ್ಬ ಹೆಂಗಸು ಹುಳಿಹಿಟ್ಟನ್ನು ತೆಗೆದುಕೊಂಡು ಮೂರು ಸೇರು ಹಿಟ್ಟಿನಲ್ಲಿ ಕಲಸಿಡಲು ಆ ಹಿಟ್ಟೆಲ್ಲಾ ಹುಳಿಯಾಯಿತು. (ಮತ್ತಾ. 13:33).

1. ಫರಿಸಾಯರ ಹುಳಿಹಿಟ್ಟು (ಮತ್ತಾ. 16:6). ಜೀವಿತದಲ್ಲಿ ಪರಿವರ್ತನೆಯಿಲ್ಲದ ಉಪದೇಶ
2. ಸದ್ದುಕಾಯರ ಹುಳಿಹಿಟ್ಟು (ಮತ್ತಾ. 16:6–12) ದುರ್ಬೋಧನೆ.
3. ಹೆರೋದನ ಹುಳಿಹಿಟ್ಟು (ಮಾರ್ಕ. 8:15) ವ್ಯಭಿಚಾರ
4. ಕೊರಿಂಥದವರ ಹುಳಿಹಿಟ್ಟು (1 ಕೊರಿ. 5:6–8) ಜಾರತ್ವ
5. ಗಲಾತ್ಯದವರ ಹುಳಿಹಿಟ್ಟು (ಗಲಾ. 5:9) ಪುನ: ಧಾರ್ಮಿಕ ನೊಗದಲ್ಲಿ ಸಿಕ್ಕಿಸುವಂತದ್ದು. ಸ್ವಲ್ಪ ಪಾಪ ಇರುವ ಒಬ್ಬ ವ್ಯಕ್ತಿಯಿಂದ ಇಡೀ ಸಭೆಗೆ ಸಮಸ್ಯೆಯಾಗಲು ಸಾಧ್ಯವಿದೆ. ನಾವು ಸಭೆಯಲ್ಲಿ ಚಿಕ್ಕ ಪಾಪಗಳ ಕುರಿತು ಕೂಡ ಅಲಕ್ಷವಾಗಿರಬಾರದು ಇಲ್ಲದಿದ್ದರೆ ಇಡೀ ಸಭೆ ಕಟ್ಟು ಹೋಗಲು ಸಾಧ್ಯವಿದೆ.

**ಈಜೆಬೆಲ್ ಎಂಬ ಸ್ತ್ರೀಯರು** : (1 ಅರಸು. 16:31): ಇಸ್ರಾಯೇಲ್ಯರ ಅರಸನಾದ ಅಹಾಬನ ಹೆಂಡತಿ 1 ಅರಸು. 16:29 ಇವಳು ಚೀದೋನ್ಯರ ಅರಸನಾದ ಎತ್ಬಾಳನ ಮಗಳು. ಎತ್ಬಾಳ ಒಬ್ಬ ಬಾಳನ ಪುರೋಹಿತನಾಗಿದ್ದನು. ಈಜೆಬೆಲಳು ಆತ್ಮೀಯ ಸಂಬಂಧದಿಂದ ಇಸ್ರಾಯೇಲಿಗೆ ಬಂದವಳಲ್ಲ, ಲೌಕಿಕ ಸಂಬಂಧದಿಂದ ಇಸ್ರಾಯೇಲಿಗೆ ಬಂದವಳಾಗಿದ್ದಳು. ಇಸ್ರಾಯೇಲರ 10 ಗೋತ್ರಗಳ ಅರಸನಾದ ಅಹಾಬನ ಹೆಂಡತಿಯಾಗಿ–ರಾಜಕೀಯ ಸಂಬಂಧದಿಂದ ಬಂದವಳಾಗಿದ್ದಳು.

1) ಬಾಳನನ್ನು, ಅಶೇರ ದೇಗುಲಗಳನ್ನು ಇಸ್ರಾಯೇಲಿನಲ್ಲಿ ಪ್ರತಿಷ್ಠಿಸಿದಳು.
2) ಜನರನ್ನು ವಿಗ್ರಹಾರಾಧನೆಗೆ ನಡೆಸಿದಳು.
3) ಸುಳ್ಳು ಸಾಕ್ಷಿಗಳ ಮೂಲಕ ಮೋಸದಿಂದ ನಾಬೋತನನ್ನು ಕೊಂದಳು
4) ನಾಬೋತನ ತೋಟವನ್ನು ಮೋಸದಿಂದ ವಶಪಡಿಸಿ ಕೊಂಡಳು
5) ಶ್ರೇಷ್ಠ ಪ್ರವಾದಿಯಾದ ಎಲೀಯನ ಮನಗುಂದುವಿಕೆಗೆ ಕಾರಣವಾದಳು.

**ಈಜೆಬೆಲಳ ಉಪದೇಶ** : 1) ಜಾರತ್ವ 2) ವಿಗ್ರಹಾರಾಧನೆ 3) ವಿಗ್ರಹಾರ್ಪಿತ ಪದಾರ್ಥಗಳನ್ನು ತಿನ್ನಬಹುದು.

**ಈಜಾಬೆಲಳ ಶಿಕ್ಷೆ :**

1) ಹಾಸಿಗೆಯ ಮೇಲೆ ಬೀಳುವಂತೆ ಮಾಡುವೆನು
2) ಮಕ್ಕಳನ್ನು ಕೊಲ್ಲುವೆನು– ಮಕ್ಕಳು ಅಂದರೆ ಅವಳಂತಿರುವ ಇತರ ಸಭೆಗಳು.

**ಪ್ರತಿಯೊಬ್ಬ ಕ್ರೈಸ್ತ ವಿಶ್ವಾಸಿಗೆ ಬೋಧನೆ** :– (ಪ್ರಕ. 2:25–29)

1) ನಿನಗಿರುವುದನ್ನು ನಾನು ಬರುವ ತನಕ (ಕರ್ತನಾದ

ನೀವು ಕೂಗಿಕೊಂಡ ಶಬ್ದವನ್ನು ಆತನು ಕೇಳಿ ನಿಮಗೆ ಕೃಪೆ ತೋರಿಸೇ ತೋರಿಸುವನು;
ಕೇಳಿದ ಕೂಡಲೆ ನಿಮಗೆ ಸದುತ್ತರವನ್ನು ದಯಪಾಲಿಸುವನು (ಯೆಶಾ. 30:19).

ಯೇಸುಕ್ರಿಸ್ತನ ಬರೋಣದ ತನಕ) ಬಿಗಿಯಾಗಿ ಹಿಡಿದುಕೊಂಡಿರಬೇಕು. ದುರ್ಬೋಧನೆಯಿಂದಾಗಲಿ, ಪಾಪದಿಂದಾಗಲಿ, ನಮಗಿರುವ ಶ್ರೇಷ್ಠವಾದ ಸತ್ಯತೆಯ ಆಶೀರ್ವಾದಗಳನ್ನು ಕಳಕೊಳ್ಳಬಾರದು.

2) ಜಯಶಾಲಿಯಾಗಿರು :– ಕ್ರಿಸ್ತಿಯ ಜೀವಿತದಲ್ಲಿ ದುರ್ಬೋಧನೆ, ಜಾರತ್ವ, ವಿಗ್ರಹಾರಾಧನೆ, ಶೋಧನೆ ಎಲ್ಲದರ ಮೇಲೆ ಜಯಹೊಂದಿ ಜಯಶಾಲಿಯಾದ ಕ್ರೈಸ್ತ ಜೀವನ ನಡೆಸಬೇಕು.

3) ನನಗೆ ಮೆಚ್ಚಿಕೆಯಾದ ಕೃತ್ಯಗಳನ್ನು ಕಡೇವರೆಗೂ ನಡೆಸಬೇಕು. ಲೋಕವನ್ನು ಮೆಚ್ಚಿಸುವುದಲ್ಲ, ನಮ್ಮ ಜೀವಿತದ ಪ್ರತಿಯೊಂದು ಕಾರ್ಯಗಳ ಮೂಲಕ, ಸೇವೆಯ ಮೂಲಕ ಕರ್ತನನ್ನು ಮೆಚ್ಚಿಸಬೇಕು.

**ಆಶೀರ್ವಾದಗಳು :**

1) ಜನಾಂಗಗಳ ಮೇಲೆ ಅಧಿಕಾರ :– ಸಾವಿರ ವರ್ಷಗಳ ಕ್ರಿಸ್ತನ ಆಡಳಿತದಲ್ಲಿ ನಾವು ಹೊಂದಿಕೊಳ್ಳುತ್ತೇವೆ.

2) ಕಬ್ಬಿಣದ ಕೋಲಿನಿಂದ ಆಳುವನು (ಕಬ್ಬಿಣ ಸ್ಥಿರವಾದ ಆಡಳಿತವನ್ನು ಸೂಚಿಸುತ್ತದೆ) ಪ್ರಕ. 12:5, 19:15.

3) ಮಣ್ಣಿನ ಮಡಿಕೆಗಳು ಒಡೆಯುವಂತೆ ಅವರ (ಜನಾಂಗಗಳ) ಬಲ ಮುರಿಯುವದು. (ಜನಾಂಗಗಳು ಅಧಿಕಾರದ ಅವಧಿ ಮುಗಿಯುವ ಕುರಿತಾಗಿದೆ).

4) ಉದಯ ಸೂಚಕ ನಕ್ಷತ್ರ ಅವನಿಗೆ ಕೊಡುವೆನು :– ಯೆಶಾ. 14:12ರ ಪ್ರಕಾರ ಸೈತಾನನ ಮೂಲ ಹೆಸರು ಉದಯ ನಕ್ಷತ್ರವಾಗಿತ್ತು ಅಂದರೆ ಲೂಸಿಫರ್ ಎಂಬುದಾಗಿ ಆದರೆ ಕರ್ತನಾದ ಯೇಸುಕ್ರಿಸ್ತನನ್ನು ಉದಯ ಸೂಚಕ ನಕ್ಷತ್ರ, ಉದಯ ಸೂಚಕನಾದ ಪ್ರಕಾಶವುಳ್ಳ ನಕ್ಷತ್ರ ಎಂಬುದಾಗಿ ಕರೆಯುತ್ತಾರೆ (ಪ್ರಕ. 22:16, 2:28). ಯಾರು ಸತ್ಯದಲ್ಲಿ ನಡೆದು ಜಯದ ಜೀವಿತ ಜೀವಿಸುತ್ತಾರೋ ಯೇಸುವಿನಂತೆ ಪ್ರಭಾವವನ್ನು ಹೊಂದುತ್ತಾರೆ. ಕರ್ತನಾದ ಯೇಸುಕ್ರಿಸ್ತನು ಬರುವಾಗ ನಾವು ಕೂಡ ಆತನ ಹಾಗಿರುತ್ತೇವೆ ಎಂದು (1 ಯೋಹಾ. 3:1–3 ರಲ್ಲಿ ಓದುತ್ತೇವೆ. ದೇವರು ಆರಿಸುವಿಕೆಯನ್ನು ದೇವಜನರಿಗೆ ಬಿಟ್ಟಿದ್ದಾನೆ. ದೇವರ ಎಚ್ಚರಿಕೆಯ ಸಂದೇಶ ಕೇಳಿ ಅಂಗೀಕರಿಸಿ ಅದರ ಪ್ರಕಾರ ನಡೆಯುವವನೇ ಕಿವಿಯುಳ್ಳವನಾಗಿದ್ದಾನೆ. "ವಾಕ್ಯದ ಪ್ರಕಾರ ನಡೆಯುವವರಾಗಿರಿ; ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ" (ಯಾಕೋ. 1:22).

**ಸಾರ್ದಿಸ್ ಸಭೆ** :– ಸಾರ್ದಿಸ್ ಸಭೆಯ ಕುರಿತಾಗಿ 6 ವಚನಗಳಲ್ಲಿ ವಿವರಿಸಲಾಗಿದೆ.

ಸಾರ್ದಿಸ್ ಇದ್ದು ದುರ್ಬಲವಾದ ಸಭೆಯಾಗಿದೆ.

ಸಾರ್ದಿಸ್ ಅಂದರೆ ಅರ್ಥ ಶ್ರೇಷ್ಟ ವಸ್ತುಗಳು.

ಸಭಾಕಾಲ :– ಕ್ರಿ.ಶ. 1517 ರಿಂದ ಕ್ರಿ.ಶ 1520

ಅನುಭವ ನವೀಕರಣ ಕಾಲ

ಸಾಮ್ಯ – ಬಚ್ಚಿಟ್ಟ ನಿಧಿ

ಕ್ರಿ.ಪೂ 549 ರಲ್ಲಿ ಅಡಿಯಾ ರಾಜ್ಯದ ರಾಜಧಾನಿ :– ಇದು ಹರ್ಮಿಸ್ ನದಿಯಿಂದ 1500 ಅಡಿ ಎತ್ತರದಲ್ಲಿರುವ ಪಟ್ಟಣವಾಗಿದೆ. ಥುವತೈರದಿಂದ 30 ಮೈಲಿ ದೂರದಲ್ಲಿದೆ. ಸಾರ್ದಿಸ್ ವ್ಯವಸಾಯಕ್ಕೆ ಪ್ರಸಿದ್ಧವಾದ ಪಟ್ಟಣವಾಗಿದೆ. ಇವತ್ತು ಸಾದ್ ಎಂದು ತಿಳಿಯಲ್ಪಡುತ್ತಿದೆ. ಇಂದು ಕೆಲವು ಕಲ್ಲುಗಳು ಪಳೆಯುಳಿಕೆಯಾಗಿದೆ. ಈ ಸಭೆಯ ಪ್ರತ್ಯೇಕತೆ, ಒಳ್ಳೆತನ ಏನೂ ಇಲ್ಲ.

ಪ್ರಕ. 3:1 ಸಾರ್ದಿಸಿನ ಸಭೆಯ ದೂತ ಅಂದರೆ ಸಭೆಯ ಸಭಾಪಾಲಕನಾಗಿದ್ದಾನೆ. 7 ಸಂಖ್ಯೆ ಅದು ಪರಿಪೂರ್ಣವಾದ ಸಂಖ್ಯೆಯಾಗಿದೆ. ಅದು ದೈವೀಕ ಪರಿಪೂರ್ಣತೆಯನ್ನು ಸೂಚಿಸುತ್ತದೆ. ಏಳು ಆತ್ಮಗಳು ಅಂದರೆ ಪರಿಶುದ್ಧಾತ್ಮನ ಏಳು ವಿಧವಾದ ಕಾರ್ಯವನ್ನು ವಿವರಿಸುತ್ತದೆ. ಯೆಶಾ. 11:1–2 1) ಜ್ಞಾನದ ಆತ್ಮ 2) ವಿವೇಕದ ಆತ್ಮ 3) ಆಲೋಚನೆಯ ಆತ್ಮ 4) ಪರಾಕ್ರಮದ ಆತ್ಮ 5) ತಿಳುವಳಿಕೆಯ ಆತ್ಮ 6) ಯೆಹೋವನ ಭಯವನ್ನುಂಟು ಮಾಡುವ ಆತ್ಮ 7) ಯೆಹೋವನ ಆತ್ಮ.

7 ನಕ್ಷತ್ರಗಳು 7 ವಿಧವಾದ ದೇವದೂತರಿಂದ ಸುತ್ತುವರಿಯಲ್ಪಟ್ಟವನು ಎಂಬ ಅರ್ಥವೂ ಬರುತ್ತದೆ (ನಕ್ಷತ್ರವನ್ನು ದೇವದೂತನಿಗೆ ಹೋಲಿಸಿ ಹೇಳಲಾಗಿದೆ) ಪ್ರಕ. 9:1.

**ಈ ಸಭೆಯ ಅವಸ್ಥೆ:** ಜೀವಿಸುವವನು ಎಂದು ಹೆಸರಿದ್ದರೂ ಸತ್ತದ್ದಾಗಿತು. ಇದರ ಅರ್ಥ ಏನು? ಇದಕ್ಕೆ 4 (ನಾಲ್ಕು ಅರ್ಥಗಳು ಇವೆ)

1) ಕ್ರೈಸ್ತ ಸಭೆ ಎಂದು ಹೆಸರಿದ್ದರೂ ಕ್ರೈಸ್ತ ಉಪದೇಶಗಳಾಗಲಿ, ವಚನ ಪ್ರಕಾರವಾದ ಆರಾಧನೆಯಾಗಲಿ, ಸೇವೆಯಾಗಲಿ, ಭಕ್ತಿಯಾಗಲಿ ಇಲ್ಲದಿರುವದು.

2) ರಕ್ಷಣೆ ಹೊಂದಿ ದೀಕ್ಷಾಸ್ನಾನ ತೆಗೆದುಕೊಂಡಿದ್ದರೂ ಪವಿತ್ರಾತ್ಮನ ಅಭಿಷೇಕ, ಬಿಡುಗಡೆ, ಸೌಖ್ಯಗಳು, ಸರಿಯಾದ ಉಪದೇಶ ಇಲ್ಲದಿರುವುದು.

3) ರಕ್ಷಣೆ ಹೊಂದಿ ದೀಕ್ಷಾಸ್ನಾನ ತೆಗೆದುಕೊಂಡಿದ್ದರೂ ಆತ್ಮೀಕ ಚಟುವಟಿಕೆಗಳು ಇಲ್ಲದಿರುವದು, ಸುವಾರ್ತ ಸೇವೆಗೆ ಪ್ರಾಮುಖ್ಯತೆ ಇಲ್ಲ, ಆತ್ಮಗಳ ಆದಾಯ ಇಲ್ಲದಿರುವುದು.

4) ರಕ್ಷಣೆ ಹೊಂದಿ ದೀಕ್ಷಾಸ್ನಾನ ತೆಗೆದುಕೊಂಡಿದ್ದರೂ ವಾಕ್ಯದ ಅಜ್ಞಾನದ ನಿಮಿತ್ತವಾಗಿ ಮತ್ತು ಸಮರ್ಪಣೆಯ ಕೊರತೆಯಿಂದಾಗಿ ಸತ್ಯಕ್ಕಾಗಿ ನಿಲ್ಲುವವರಿಲ್ಲ.

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿಕೊಟ್ಟ ಯೇಸುಕ್ರಿಸ್ತನನ್ನೂ ತಿಳಿಯುವುದೇ ನಿತ್ಯಜೀವವು (ಯೋಹಾ. 17:3).

# ನೂತನ ವರುಷದಲ್ಲಿ ಅತ್ಯುತಮ್ಮ ಹೆಜ್ಜೆಯಲ್ಲಿ ಮುನ್ನಡೆಯೋಣ

ನನ್ನ ಆತ್ಮೀಯ ಓದುಗರೇ, ಕಳೆದ 2014ನೇ ವರುಷದಲ್ಲಿ ನಾವು ಕ್ರಿಸ್ತನ ಹುಟ್ಟಿದ ಆಚರಣೆ ದಾಟಿ ಈ ಹೊಸ ವರ್ಷದ ಆರಂಭದ ತಿಂಗಳನ್ನು ದಾಟಿ ಮುನ್ನಡೆಯುತ್ತಿದ್ದೇವೆ. ವಿಶೇಷವಾಗಿ ನಮ್ಮ ಈ ಜೀವನ ಪ್ರಪಂಚದಲ್ಲಿ ನಾವು ಕಳೆಯುವ ಪ್ರತಿ ಸಮಯ ಬಹು ಅಮೂಲ್ಯವಾಗಿದೆ. ಆದರಿಂದ ಪ್ರಥಮವಾಗಿ ದೇವರು ನಮಗೆ ಅನುಗ್ರಹಿಸಿದ ಸಮಯ, ಅವಕಾಶ ಮತ್ತು ವರುಷಗಳಿಗಾಗಿ ನಾವು ಅನಂತ ಉಪಕಾರ ಮತ್ತು ಸ್ತೋತ್ರಗಳನ್ನು ಸಲ್ಲಿಸಬೇಕಾಗಿದೆ. ಈ ಸಂದರ್ಭದಲ್ಲಿ ನನಗೆ ನೆನಪಿಗೆ ಬರುವ ಉಪಕಾರ ಸ್ತುತಿಯ ಹಾಡಿನ ಎರಡು ಸಾಲುಗಳನ್ನು ಇಲ್ಲಿ ಉಲೇಖಿಸಲು ಸಂತೋಷಿಸುತ್ತೇನೆ. “ನೂತನ ದಿನದಲ್ಲಿ ನನ್ನ ನಡೆಸು, ನೂತನ ಕೃಪೆಯಿಂದ ನನ್ನ ತುಂಬಿಸು, ಹೊಸ ಬಲವ ನೀಡು ದೇವಾ........ ಹೊಸ ಕೃಪೆಯ ನೀಡು ದೇವಾ. ಮೇಲಿನ ವಿಶೇಷ ಸ್ತೋತ್ರದ ಸಾಲುಗಳು ಖಂಡಿತವಾಗಿಯೂ ಈ ವರುಷದಲ್ಲಿ ಪ್ರೇರಣೆ ನೀಡಲಿ ಎಂದು ಆಶಿಸುತ್ತೇನೆ.

ಕಳೆದು ಹೋದ ವರುಷದಲ್ಲಿ ಅನೇಕ ಪ್ರಕೃತಿ ವಿಕೋಪಗಳು ವಿಶೇಷವಾಗಿ ಭಾರತ ದೇಶದ ಕಾಶ್ಮೀರ ಮತ್ತು ಇತರ ದೇಶಗಳಲ್ಲಿ ಅಮೇರಿಕ, ಚೀನಾ, ಫಿಲಿಫೈನ್ಸ್, ಇಂಡೋನೇಷಿಯ ಮತ್ತು ಆಸ್ಟ್ರೇಲಿಯ ಇನ್ನು ಹಲವಾರು ಕಡೆಗಳಲ್ಲಿ ನಡೆದದ್ದನ್ನು ನಾವು ಮಾಧ್ಯಮ ಮತ್ತು ಟಿ.ವಿಗಳ ಮೂಲಕ ನೋಡಿದ್ದೇವೆ. ಇದರಿಂದ ಲಕ್ಷಾಂತರ ಜನರು ಸಾವಿಗೀಡಾಗಿದ್ದಾರೆ. ಇಷ್ಟೇ ಅಲ್ಲದೆ, ಮಧ್ಯ ಪೂರ್ವದ ಮುಸ್ಲಿಂ ರಾಷ್ಟ್ರಗಳಲ್ಲಿ ಚಿತ್ರಹಿಂಸೆ, ನರಮೇದಗಳು ಮತ್ತು ನಮ್ಮ ನೆರೆ ರಾಷ್ಟ್ರವಾದ ಪಾಕಿಸ್ತಾನದಲ್ಲಿ ಅಮಾಯಕ ಮಕ್ಕಳ ಕೊಲೆಗಳು, ಪ್ರತಿಯೊಬ್ಬ ನಾಗರೀಕರಿಗೆ ಬಹಳ ಚಿಂತೇಗೀಡು ಮಾಡುವ ವಿಷಯ. ಕಳೆದ ವರುಷದಲ್ಲಿ ಒಂದು ದೇಶದ ವಿರುದ್ಧ, ಇನ್ನೊಂದು ದೇಶ ದ್ವೇಷ ಸಾಧನೆ, ಯುದ್ಧದ ಕಾರ್ಮೋಡ, ಕ್ಷಾಮ, ಅತೀರೇಖ, ಲೈಂಗಿಕ ಹಗರಣಗಳು ಮತ್ತು ವಿವಿಧ ದೇಶಗಳಲ್ಲಿ ಭಯೋತ್ಪಾದನೆ, ಹಿಂಸಚಾರಗಳು, ನಡೆದದ್ದನ್ನು ನೋಡಿದ್ದೇವೆ. ನಮ್ಮ ಹಿಂದಿನ ತಲೆಮಾರು ತ್ಯಾಗ ಮತ್ತು ಬಲಿಧಾನಗಳ ಮೂಲಕ ಸ್ಥಾಪಿಸಿದ ಕ್ರೈಸ್ತತ್ವ ಸಿದ್ಧಾಂತ ಇಂದು ಇನ್ನೂ ಕಠಿಣ ಸ್ಥಿತಿ ಎದುರು ನೋಡುತ್ತಿದ್ದೇವೆ. ನಮ್ಮ ಯುವ ಪೀಳಿಗೆ ದೇವರ ಭಯ ಮತ್ತು ಪ್ರೀತಿಯಿಲ್ಲದೆ ತಪ್ಪು ಹೆಜ್ಜೆಯಲ್ಲಿ ಮುನ್ನಡೆಯುತ್ತಿದ್ದಾರೆ. ಮಕ್ಕಳಿಗೆ ಮನೆಯಲ್ಲಿ ಪ್ರಾರ್ಥನೆ ಮತ್ತು ಭಾನುವಾರದ ಆರಾಧನೆ, ಪ್ರಾರ್ಥನೆಗಳನ್ನು ನಿರ್ಲಕ್ಷಿಸಿ ಮನೆಯಲ್ಲಿ ಟಿ.ವಿ ನೋಡುವುದೇ ಮೋಜಾಗಿದೆ. ಈ ಪ್ರಸುತ್ತ ಸ್ಥಿತಿಯಲ್ಲಿ ಸಮಾಜದಲ್ಲಿ ಒಳ್ಳೆಯದ್ದನ್ನು ನಿರೀಕ್ಷಿಸುವುದು ಅಸಾಧ್ಯ. ನಾವು ಈ ಹೊಸ ವರ್ಷದಲ್ಲಿ ಪ್ರತಿ ಮನೆಗಳಲ್ಲಿ ದೇವರ ಪ್ರೀತಿ ಮತ್ತು ಭಯಭಕ್ತಿ ಬಂದಾಗಲೇ ನಮ್ಮ ಸಮಾಜವು ಹೊಸ ಅಭಿರುಚಿಯೊಂದಿಗೆ ಮುನ್ನಡೆಯಲು ಸಾಧ್ಯ. ನಾವು ದೇವರ ಪರಿಶುದ್ಧ ಸತ್ಯವೇದದಲ್ಲಿ ದೇವರ ವಾಕ್ಯವನ್ನು ಗಮನಿಸುವಾಗ – ಪ್ರತಿಯೊಬ್ಬನು ತನ್ನ ಒಳ್ಳೇದಕ್ಕಾಗಲಿ ಅಥವಾ ಕೆಟ್ಟದಕ್ಕಾಗಲಿ ದೇವರ ನ್ಯಾಯಾಲಯದಲ್ಲಿ ಯಥಾಸ್ಥಿತಿಯಲ್ಲಿ ನಿಂತು ಉತ್ತರಿಸಬೇಕಾಗಿದೆ. ಒಂದು ವೇಳೆ ಈ ಲೋಕದ ನ್ಯಾಯಾಲಯದಲ್ಲಿ ಅನೇಕರು ಪರಾಗಬಹುದು ಆದರೆ ದೇವರ ನ್ಯಾಯಾಲಯದಲ್ಲಿ ನಾವು ಮಾಡಿದ ತಪ್ಪಿಗಾಗಿ ಇನ್ನೊಬ್ಬರು ನಮ್ಮನ್ನು ಕ್ಷಮಿಸಲು ಸಾಧ್ಯವೇ ಇಲ್ಲ ಎಂಬುದನ್ನು ನಾವು ಅರಿಯಬೇಕಾಗಿದೆ. ದೇವರ ಪರಿಶುದ್ಧ ಸತ್ಯವೇದ ಗ್ರಂಥದಲ್ಲಿ ತಿಳಿಸಿದ ಪ್ರಕಾರ ದೋಷವನ್ನು ಮುಚ್ಚಿಕೊಳ್ಳುವವನಿಗೆ ಶುಭವಾಗದು ಆದರೆ ಅದನ್ನು ಒಪ್ಪಿಕೊಂಡು ಬಿಟ್ಟು ಬಿಟ್ಟರೆ ಕರುಣೆ ದೊರೆಯುವುದು. ಅನೇಕ ಸಲ ದೇವರ ವಾಕ್ಯದಲ್ಲಿ ಕರ್ತನು ಕಲಿಸಿದ ಪ್ರಾರ್ಥನೆ ಮತ್ತು ಯೇಸು ಕ್ರೂಜೆಯಲ್ಲಿ ಆಡಿದ 1ನೇ ಮಾತು ಉಲ್ಲೇಖಿಸಿ ತಪ್ಪು ಮತ್ತು ಕಳ್ಳತನ ಮಾಡುವ ಪ್ರತಿಯೊಬ್ಬನನ್ನು ಕ್ಷಮಿಸುವುದಾದರೆ ದೇಶಗಳಲ್ಲಿ ನ್ಯಾಯಾಲಯದ ಅಗತ್ಯತೆ ಇಲ್ಲ ಆದರೆ ಇಲ್ಲಿ ಯೇಸು ದೇವರ ಚಿತ್ತದ ಪ್ರಕಾರ ಆತನ ಉದ್ದೇಶಕ್ಕಾಗಿ ಬಲಿಯಾಗಿ ಕ್ಷಮಿಸಿದ್ದಾನೆ. ಆದರೆ ಆತನ 2ನೇ ಬರೋಣದಲ್ಲಿ ಯಾವ ಕ್ಷಮಾಪಣೆ ಇಲ್ಲ ಎಂಬುದನ್ನು ನಾವು ಅರ್ಥೈಸಿಕೊಳ್ಳಬೇಕಾಗಿದೆ. ಆದರಿಂದ ನನ್ನ ಆತ್ಮೀಯರೇ, ಈ ಹೊಸ ವರುಷದಲ್ಲಿ ಮುಂದುವರಿಯುವಾಗ ನಾವು ಕೇವಲ ಬಾಯಿಂದ ಒಳ್ಳೇಯ ಮಾತುಗಳನ್ನು ಬೋಧಿಸಿ ಅಥವಾ ಬರೆದರೆ ಉಪಯೋಗವಿಲ್ಲ. ಅದನ್ನು ನಮ್ಮ ನಿಜ ಜೀವನದಲ್ಲಿ ಪಾಲಿಸಿದಲ್ಲಿ ಮಾತ್ರ ದೇವರು ನಮ್ಮನ್ನು ಮೆಚ್ಚುತ್ತಾನೆ.

ಕಡೆಯದಾಗಿ, ಈ ಹೊಸ ವರುಷದ ಪ್ರಾರಂಭದಲ್ಲಿ ನಾವು ತಿಳಿಯದೇ ಮಾಡಿದ ತಪ್ಪುಗಳಿದ್ದರೆ ಸುಂಕದ ಜಕ್ಕಾಯನಂತೆ ಬಿಟ್ಟು ಬಿಟ್ಟು ನೂತನ ಮನಸ್ಸಿನಿಂದ ಮುನ್ನಡೆಯೋಣ. ನಾವು ಕೇವಲ ಫರಿಸಾಯನು ಮಾಡಿದ ತೋರಿಕೆಯ ಪ್ರಾರ್ಥನೆಯಂತೆ ಮಾಡಿದರೆ ದೇವರು ನಮ್ಮನ್ನು ಎಂದಿಗೂ ಮೆಚ್ಚಲಾರನು. ನಾವು ದೀನತೆ ಮತ್ತು ತಗ್ಗಿದ ಮನೋಭಾವದಿಂದ ದೇವರಿಗೆ ಮಾಡುವ ಉಪಕಾರ ಸ್ತುತಿಗೆ ದೇವರು ನಮ್ಮನ್ನು ಈ ನೂತನ ವರುಷದಲ್ಲಿ ಹೊಸ ಕೃಪೆ ಮತ್ತು ಬಲದಿಂದ ಮುನ್ನಡೆಸುತ್ತಾನೆ. ಈ ಮೂಲಕ ದೇವರು ನಮ್ಮೆಲ್ಲರನ್ನು ಬಲಪಡಿಸಿ ಮುನ್ನಡೆಸಲಿ.

ಪ್ರೀತಿ ಮತ್ತು ವಂದನೆಗಳೊಂದಿಗೆ

**ಜೇಮ್ಸ್ ಅಂಬ್ಲರ್, ಮಲ್ಪೆ.**

ಯೆಹೋವನ ಹಸ್ತವು ರಕ್ಷಿಸಲಾರದಂತೆ ಮೋಟುಗೈಯಲ್ಲ;
ಆತನ ಕಿವಿಯು ಕೇಳಲಾರದ ಹಾಗೆ ಕಿವುಡಲ್ಲ (ಯೆಶಾ. 59:1).

# ಪಾಪದಿಂದ ಬಂದ ಶಾಪ!

ಇಸ್ರಾಯೇಲ್ ರಾಜ್ಯವನ್ನು ಆಳಿದ ಅರಸರು ಸೌಲ, ದಾವೀದ ಮತ್ತು ಸೊಲೊಮೋನನು. 1 ಅರಸುಗಳ ಪುಸ್ತಕದಲ್ಲಿ ಸೊಲೊಮೋನನ ಆಳ್ವಿಕೆಯ ನಂತರ ಇಸ್ರಾಯೇಲ್ ರಾಜ್ಯವು ಎರಡು ಭಾಗವಾಗುತ್ತದೆ. ಕಾರಣ ಸೊಲೊಮೋನನ ಪಾಪ (1 ಅರಸು. 11:31–33). ಆರಂಭದಲ್ಲಿ ದೇವರಿಗೆ ವಿಧೇಯನಾಗಿದ್ದ ಸೊಲೊಮೋನನು ದೇವರಿಗೆ ಅಡ್ಡಬೀಳದಿರುವ ಪತ್ನಿಯರ ಮಾತನ್ನು ಕೇಳಿ ದೇವರನ್ನು ಬಿಟ್ಟು ದೂರ ಹೋದನು. ದೇವರು ಅವನಿಗೆ ಎರಡು ಸಾರಿ ದರ್ಶನ ಕೊಟ್ಟು ಎಚ್ಚರಿಸಿದರೂ ಅವನು ಪಶ್ಚಾತ್ತಾಪ ಪಡಲಿಲ್ಲ. (1 ಅರಸು. 11:9–10).

ಸೊಲೊಮೋನನ ತಂದೆಯಾದ ದಾವೀದನು ಬತ್ಶೇಬಳೊಡನೆ ಪಾಪ ಮಾಡಿದನು. ಇದರ ನಿಮಿತ್ತವಾಗಿ ಹುಟ್ಟಿದ ಮಗುವು ಸತ್ತು ಹೋಗುತ್ತದೆ. ದೇವರು ದಾವೀದನನ್ನು ಪ್ರವಾದಿಯ ಮೂಲಕ ಎಚ್ಚರಿಸುತ್ತಾನೆ. ಎಚ್ಚರಗೊಂಡ ದಾವೀದನು ಪಾಪವನ್ನು ಅರಿಕೆ ಮಾಡಿ ಪಶ್ಚಾತ್ತಾಪ ಪಡುತ್ತಾನೆ. ನಂತರ ಅದೇ ಬತ್ಶೇಬಳಲ್ಲಿ ಸೊಲೊಮೋನನ್ನು ಪಡೆಯುತ್ತಾನೆ. ಸೊಲೊಮೋನನನ್ನು ದೇವರು ಆಶೀರ್ವದಿಸುತ್ತಾನೆ. ಇದರಿಂದ ಸೊಲೊಮೋನನು ದಾವೀದನನ್ನು ನೆನಪುಮಾಡಿಕೊಂಡಿದ್ದರೆ ಪಾಪದಿಂದ ಬರುವ ಶಾಪದ ಬಗ್ಗೆ ತಿಳಿದುಕೊಳ್ಳುತ್ತಿದ್ದನು, ಪಶ್ಚಾತ್ತಾಪಪಡುವುದರಿಂದ ಆಗುವ ಮಹತ್ವವನ್ನು ಅರಿತುಕೊಳ್ಳುತ್ತಿದ್ದನು.

ಕಳೆದ ದಿನಗಳನ್ನು ಸೊಲೊಮೋನನು ಮರೆತನು; ಕರ್ತನ ಎಚ್ಚರಿಕೆಗೆ ಕಿವಿಗೊಡಲಿಲ್ಲ. ಕಠಿಣ ಮಾಡಿಕೊಂಡನು ಸೊಲೋಮೋನನು. ಶಾಪಗಳು ಬಂತು, ರಾಜ್ಯಗಳು ಒಡೆಯಿತು! ನಮ್ಮ ಶಾಪಗಳಿಗೆ ಕಾರಣವೇನು?

ಎರಡು ಅರಸುಗಳ ಪುಸ್ತಕದಲ್ಲಿ ಎರಡು ಸ್ಥಳಗಳ ಬದಲಾವಣೆ !

2 ಅರಸುಗಳ ಪುಸ್ತಕದ ಆರಂಭವೂ ಅಂತ್ಯವೂ ಬಹಳ ಗಮನಿಸತಕ್ಕದ್ದು. ಈ ಪುಸ್ತಕದ ಆರಂಭದಲ್ಲಿ ಎಲೀಯ ಪ್ರವಾದಿಯನ್ನು ಕುರಿತು ಓದುತ್ತೇವೆ. ದೇವರಿಗೆ ನಂಬಿಗಸ್ತನಾಗಿದ್ದ ಈ ಪ್ರವಾದಿಯನ್ನು ದೇವರು ತೆಗೆದುಕೊಂಡ ಸಂಭವವನ್ನು 2ನೇ ಅಧ್ಯಾಯದಲ್ಲಿ ಸುಂದರವಾಗಿ ಬರೆಯಲ್ಪಟ್ಟಿರುತ್ತದೆ.

ದೇವರಿಗೆ ವಿಧೇಯರಾಗಿಯೂ ನಂಬಿಗಸ್ತರಾಗಿಯೂ ಇದ್ದವರು ಕಷ್ಟಗಳಿಂದ ತುಂಬಿರುವ ಈ ಲೋಕವನ್ನು ಬಿಟ್ಟು ಪರಲೋಕಕ್ಕೆ ಜೀವದೊಂದಿಗೆ ತೆಗೆದುಕೊಳ್ಳಲ್ಪಟ್ಟ ವಿಷಯದೊಂದಿಗೆ ಪ್ರಾರಂಭವಾದ ಈ ಪುಸ್ತಕದ ಕೊನೆಯನ್ನು ನೋಡಿರಿ. ದೇವರಿಗೆ ವಿರೋಧವಾಗಿ ನಡೆದ ಯೆಹೂದ್ಯರನ್ನು ಬಾಬಿಲೋನ್ ದೇಶಕ್ಕೆ ಗುಲಾಮರನ್ನಾಗಿ ತೆಗೆದುಕೊಂಡು ಹೋಗುವ ದು:ಖಕರವಾದ ಸಂಗತಿಯು ವಿವರಿಸಲ್ಪಟ್ಟಿದೆ.

ಈ ಲೋಕದಿಂದ ಉನ್ನತಲೋಕದಲ್ಲಿ ತೆಗೆದುಕೊಳ್ಳಲ್ಪಡುವ ಮಹಿಮೆಯಾದ ಅಂತ್ಯ, ಒಂದು ಸ್ವಂತ ದೇಶದಿಂದ ಅನ್ಯದೇಶಕ್ಕೆ ಗುಲಾಮತನಕ್ಕೆ ಹೋದಂತಹ ಮನೋವೇದನೆಯನ್ನುಂಟು ಮಾಡುವ ಅಂತ್ಯ ಇನ್ನೊಂದು. ಯೇಸುಕ್ರಿಸ್ತನು ಬರುವ ದಿನ ಸಮೀಪವಾಗಿದೆ. ಈಗ ಸತ್ಯವಂತರು ಉನ್ನತಲೋಕಕ್ಕೆ ಏರಿಹೋಗುವರು. ನೀತಿವಂತರಲ್ಲದ ಇನ್ನೊಂದು ಗುಂಪಿನವರು ಅಂತ್ಯ ಕ್ರಿಸ್ತನ ಆಳ್ವಿಕೆಗೆ ಒಳಪಡುವರು.

# ದಾವೀದನು ಹೊಂದಿದ ದೇವಾಶೀರ್ವಾದಗಳು !

ಸತ್ಯವೇದದಲ್ಲಿ 13ನೆಯ ಪುಸ್ತಕ ಒಂದು ಪೂರ್ವಕಾಲ ವೃತ್ತಾಂತ. ಇದರಲ್ಲಿ ಇಸ್ರಾಯೇಲ್ಯರ ವಂಶಾವಳಿಗಳೂ ಅರಸನಾದ ದಾವೀದನ ಘನತೆಗಳ ವಿಷಯವಾಗಿಯೂ ಬರೆಯಲ್ಪಟ್ಟಿದೆ.

ದೇವರಿಗೆ ಆಲಯವನ್ನು ಕಟ್ಟಲು ದಾವೀದನು ಮನಸ್ಸು ಮಾಡಿದನು. "ಆದರೆ ದೇವರು ನೀನು ನನಗೆ ಆಲಯವನ್ನು ಕಟ್ಟಬಾರದು. ನಿನ್ನ ಮಗನು ನನಗಾಗಿ ಒಂದು ಮನೆಯನ್ನು ಕಟ್ಟುವನು ಅಂದನು". ಅದು ಮಾತ್ರವಲ್ಲದೆ ಆಲಯವನ್ನು ಕಟ್ಟಲು ಮನಸ್ಸು ಮಾಡಿದ ದಾವೀದನ ಸಂತತಿಯನ್ನು ಆಶೀರ್ವದಿಸಿದನು. ಇದನ್ನು ಕೇಳಿದ ದಾವೀದನು "ನನ್ನಂಥವನಿಗೆ ಈ ಪದವಿಯನ್ನು ಅನುಗ್ರಹಿಸಿದಿ ನಾನೆಷ್ಟರವನು" ಎಂದು ದೇವರ ಮುಂದೆ ತನ್ನನ್ನು ತಗ್ಗಿಸಿಕೊಂಡನು"(1 ಪೂರ್ವ. 17:4–16).

ನನ್ನನ್ನು ಪ್ರೀತಿಸುವವರನ್ನು ನಾನು ಪ್ರೀತಿಸುತ್ತೇನೆ.
ಆತುರದಿಂದ ಹುಡುಕುವವರು ನನ್ನನ್ನು ಕಂಡುಕೊಳ್ಳುವರು (ಜ್ಞಾನೋ. 8:17).

ಒಂದು ಸಾರಿ ಅರಸನಾದ ಸೌಲನು ತನ್ನ ಮಗಳಾದ ಮೇರಬಳನ್ನು ಮದುವೆ ಮಾಡಿಕೊಡಲು ಮುಂದಾದಾಗ ಅಲ್ಲಿಯೂ ದಾವೀದನು ತನ್ನನ್ನು ತಗ್ಗಿಸಿಕೊಂಡು "ಅರಸ ಅಳಿಯನಾಗುವುದಕ್ಕೆ ನಾನೆಷ್ಟರವನು" ಎಂದು ತಗ್ಗಿಸಿಕೊಳ್ಳುತ್ತಾನೆ (1 ಸಮು. 18:18). ಲೋಕದ ಘನತೆ ಗೌರವಗಳೂ ಉನ್ನತ ಲೋಕದ ಮಹಿಮೆಗಳೂ ದಾವೀದನಿಗೆ ಬರುವಾಗ ದಾವೀದನು ನಾನೆಷ್ಟು ಮಾತ್ರದವನು ಎಂದು ತಗ್ಗಿಸಿಕೊಳ್ಳುವುದನ್ನು ಗಮನಿಸಿದಿರಾ?

ದೇವ ಮಗುವೇ, ದಾವೀದನಂತೆ ದೇವರಿಗೆ ಮೆಚ್ಚಿಗೆಯಾಗಿ ಜೀವಿಸಬೇಕಾದರೆ ನಿನ್ನನ್ನು ತಗ್ಗಿಸಿಕೊಳ್ಳುವುದು ಅವಶ್ಯವಲ್ಲವೇ? ದೇವರಿಗೆ ಆಲಯವನ್ನು ಕಟ್ಟಲು ಇಷ್ಟಪಟ್ಟನು ದಾವೀದನು. ದೇವರು ದಾವೀದನ ಸಂತತಿಯನ್ನು ಕಟ್ಟಿ ಎಬ್ಬಿಸಿದನು. ದೇವರ ಕಾರ್ಯಗಳನ್ನು ಮಾಡುವುದರಲ್ಲಿ ಮನಸ್ಸು ಮಾಡಿರಿ. ದೇವರು ನಿಮ್ಮ ಕಾರ್ಯಗಳನ್ನು ಗಮನಿಸುತ್ತಾನೆ.

ಸಂಗ್ರಹ

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ. ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0820 2559886**


## ಬೇಕಾಗಿದ್ದಾರೆ

- ಸ್ಟಾಫ್ ನರ್ಸ್ (ಜಿಎನ್ಎಮ್ ನರ್ಸ್ ಮತ್ತು ಬಿಎಸ್ಸಿ ನರ್ಸ್)
- ಎಮ್ಎಸ್ಡಬ್ಲ್ಯು (ಸೈಕಾಲಾಜಿಸ್ಟ್)
- ಎಮ್.ಬಿ.ಬಿ.ಎಸ್ ವೈದರು
- ಮನೋರೋಗ ತಜ್ಞವೈದ್ಯರು (ಸೈಕಿಯಾಟ್ರಿಸ್ಟ್)
- ಕ್ಲೀನರ್ ಮತ್ತು ವಾರ್ಡ್ ಬಾಯ್
- ಲ್ಯಾಬ್ ಟೆಕ್ನಿಷಿಯನ್ ವಿಶ್ವಾಸದಮನೆಯ ಆಸ್ಪತ್ರೆಗೆ ತ್ವರೆಯಾಗಿ ಬೇಕಾಗಿದ್ದಾರೆ.

ಉಚಿತ ವಸತಿ ಸೌಕರ್ಯ ಮತ್ತು ಉತ್ತಮ ವೇತನವನ್ನು (ಸಂಬಳ)ವನ್ನು ಕೊಡಲಾಗುವುದು.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ;

**9902334941, 0820 2002781.**


ದೇವರ ವಿಷಯವಾಗಿಯೂ ನಮ್ಮ ಕರ್ತನಾದ ಯೇಸುವಿನ ವಿಷಯವಾಗಿಯೂ ಪರಿಜ್ಞಾನವೂ ನಿಮಗೆ ಉಂಟಾಗಲಿ (2 ಪೇತ್ರ. 1:2).

# ಸ್ಥಳೀಯ ಮತ್ತು ವಿದೇಶ ಸುದ್ದಿ

- ವಿದೇಶಿ ಬ್ಯಾಂಕ್‌ಗಳಲ್ಲಿ ಭಾರತೀಯರು ಇಟ್ಟಿದ್ದಾರೆ ಎನ್ನಲಾದ ಕಪ್ಪು ಹಣವನ್ನು ಮರಳಿ ತರಲು ಯತ್ನಗಳು ನಡೆಯುತ್ತಿರುವ ಹೊತ್ತಿನಲ್ಲೇ, ಸ್ವಿಟ್ಸರ್ಲೆಂಡ್‌ನ ಎಚ್‌ಎಸ್‌ಬಿಸಿ ಬ್ಯಾಂಕ್‌ನಲ್ಲಿನ ಭಾರತೀಯರ ಹಣದ ಮಾಹಿತಿಯುಳ್ಳ ದೊಡ್ಡ ಸುದ್ದಿ ಸ್ಫೋಟಗೊಂಡಿದೆ.

- ರಾಜ್ಯದಲ್ಲಿ ಆರ್ಭಟಿಸುತ್ತಿರುವ ಮಹಾಮಾರಿ ಎಚ್1ಎನ್1 ಭೀಕರತೆಗೆ ಮತ್ತೆ ಇಬ್ಬರು ಬಲಿಯಾಗಿರುವುದು ತಡವಾಗಿ ಬೆಳಕಿಗೆ ಬಂದಿದೆ. ಇದರಿಂದಾಗಿ ಈ ಮಾರಕ ರೋಗದಿಂದಾಗಿ ರಾಜ್ಯದಲ್ಲಿ ಅಸುನೀಗಿದವರ ಸಂಖ್ಯೆ 12ಕ್ಕೆ ಏರಿದ್ದು, ರಾಜ್ಯದ 17 ಜಿಲ್ಲೆಗಳಲ್ಲಿ 108 ಮಂದಿ ಹಂದಿಜ್ವರಪೀಡಿತರಾಗಿದ್ದಾರೆ.

- ಭಾರತ ಮತ್ತು ಅಮೆರಿಕ ನಡುವಿನ ಅಣು ಒಪ್ಪಂದ ಅಂತಿಮಗೊಂಡ ಬೆನ್ನಲ್ಲೇ, ಪಾಕಿಸ್ತಾನದಲ್ಲಿ 6 ಅಣು ವಿದ್ಯುತ್ ಯೋಜನೆಗಳನ್ನು ಆರಂಭಿಸಲು ಚೀನಾ ಮುಂದಾಗಿದೆ. ಈ ನಿಟ್ಟಿನಲ್ಲಿ ಪಾಕಿಸ್ತಾನಕ್ಕೆ ಚೀನಾ ಇನ್ನಷ್ಟು ಅಣು ರಿಯಾಕ್ಟರ್‌ಗಳನ್ನು ರಫ್ತು ಮಾಡುವ ಸಾಧ್ಯತೆ ಇದೆ.

- ಇಸ್ಲಾಮಾಬಾದ್ ಪೇಶಾವರದಲ್ಲಿ 140 ಶಾಲಾ ಮಕ್ಕಳನ್ನು ಉಗ್ರರುಗುಂಡಿಟ್ಟು ಕೊಂದ ಘಟನೆ ಬೆನ್ನಲ್ಲೇ, ಬಾಲಕಿಯರ ಸರ್ಕಾರಿ ಶಾಲೆಯೊಂದನ್ನು ಉಗ್ರಗಾಮಿಗಳು ಉಡಾಯಿಸಿರುವ ಘಟನೆ ಪಾಕಿಸ್ತಾನದಲ್ಲಿ ನಡೆದಿದೆ.

- ಬಾಗ್ದಾದ್ :– ಇರಾಕ್‌ನ ಮಾಜಿ ಅಧ್ಯಕ್ಷ ಸದ್ದಾಂ ಹುಸೇನ್ ಅವರನ್ನು ನೇಣುಹಾಕಿದ್ದ ಹಗ್ಗಕ್ಕೀಗ ಭಾರೀ ಬೇಡಿಕೆ ಬಂದಿದೆ. ಹಗ್ಗ 42 ಕೋಟಿ ರೂ.ಗೆ ಹರಾಜು ಆಗುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

- ಸ್ಯಾಂಟಿಯಾಗೋ : ಫುಟ್ಬಾಲ್ ಆಟಗಾರರ ತಂಡ ಸೇರಿದಂತೆ 34 ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದ ವಿಮಾನ ನಾಪತ್ತೆಯಾಗಿ 50 ವರ್ಷಗಳೇ ಕಳೆದುಹೋಗಿದೆ. ಆದರೆ ಇದೀಗ ಚಿಲಿಯ ಪರ್ವತಾರೋಹಿಗಳ ತಂಡವೊಂದು ನಾಪತ್ತೆಯಾಗಿದ್ದ ವಿಮಾನದ ಭಗ್ನಾವೇಶಷವನ್ನು ಪತ್ತೆಹಚ್ಚಿರುವದು ಕುತೂಹಲಕ್ಕೆ ಎಡೆಮಾಡಿದೆ.

- ಬಹುನಿರೀಕ್ಷೆಯ ದಿಲ್ಲಿ ವಿಧಾನಸಭಾ ಚುನಾವಣೆಯಲ್ಲಿ 70 ರಲ್ಲಿ 67 ಸ್ಥಾನಗಳನ್ನು ಪಡೆಯುವ ಮೂಲಕ ಅರವಿಂದ್ ಕೇಜ್ರಿವಾಲ್ ನೇತೃತ್ವದ ಆಮ್ ಆದ್ಮಿ ಪಕ್ಷ ಅಭೂತಪೂರ್ವ ಗೆಲುವು ಸಾಧಿಸಿದೆ.

- ಹೊಸದಾಗಿ ಸ್ಥಾಪಿಸಲಾಗಿರುವ ಚಾರ್ಲ್ಸ್‌ಟನ್ ಇಎಫ್‌ಜಿ ಜಾನ್ ಮೇನಾರ್ಡ್ ಕೀನ್ಸ್ ಪ್ರಶಸ್ತಿಯನ್ನು ಅರ್ಥಶಾಸ್ತ್ರಜ್ಞ ಹಾಗೂ ನೊಬೆಲ್ ಪ್ರಶಸ್ತಿ ವಿಜೇತ ಅಮರ್ತ್ಯಸೇನ್ ಗೆದ್ದಿದ್ದಾರೆ.

- ಅಮೆರಿಕದ ಗುಪ್ತಚರ ಸೇವೆಯ ಉಪ ನಿರ್ದೇಶಕ ಅಲ್ವಿನ್ ಸ್ಮಿತ್ ತನ್ನ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಗುಪ್ತಚರ ಸಂಸ್ಥೆಯಲ್ಲಿ ನಡೆದ ಹಲವು ಹಗರಣಗಳ ವೇಳೆ ಅವರು ಸಂಸ್ಥೆಯ ದೈನಂದಿನ ಕಾರ್ಯಾಚರಣೆಗಳ ಉಸ್ತುವಾರಿಯಾಗಿದ್ದರು.

## ವಿಶೇಷ ಸೂಚನೆ

**ವಿಶ್ವಾಸದ ಮನೆಯ ಹೆಸರು ಹೇಳಿ ಆರ್ಥಿಕ ಸಹಾಯ ಕೇಳಿ ಬರುವುದಾದರೆ ಅವರು ನಮ್ಮವರೇ ಎಂದು ಖಚಿತಪಡಿಸುವುದಕ್ಕಾಗಿ ಕೆಳಕಂಡ ನಂಬರ್‌ಗಳಿಗೆ ವಿಚಾರಿಸಿರಿ. ವಿಶ್ವಾಸದ ಮನೆಗೆ ಹಣ ಕೊಡುವುದಾದರೆ ನೀವು ಅದರ ರಶೀದಿಯನ್ನು ಹಣ ಕೊಟ್ಟವರ ಬಳಿ ಕೇಳಿ ಪಡೆದುಕೊಳ್ಳಿ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0820200781, 9902334941, 9964070654, 08202559712.**

ನನ್ನ ಕರ್ತನಾದ ಕ್ರಿಸ್ತ ಯೇಸುವನ್ನರಿಯುವದೇ ಅತಿ ಶ್ರೇಷ್ಠವಾದದ್ದೆಂದು
ತಿಳಿದು ನಾನು ಎಲ್ಲವನ್ನೂ ನಷ್ಟವೆಂದೆಣಿಸುತ್ತೇನೆ (ಫಿಲಿ. 3:8).

## ಡಿಜಿಎಮ್ ಬೇತೇಲ್ ಅಂಕಣ


- ವಿಶ್ವಾಸದಮನೆಯಲ್ಲಿ ಆರೈಕೆ ಹಾಗೂ ವೈದ್ಯಕೀಯ ಶುಶ್ರೂಷೆಯನ್ನು ಹೊಂದಿ ಗುಣಮುಖರಾದಂತಹ ಸಹೋ॥ ಶೋಭಾ (ಗೀತಾ), ಸರೋಜಾದೇವಿ, ನಾರಾಯಣಮ್ಮ, ಚಿನ್ನಮ್ಮರವರು ಮರಳಿ ತಮ್ಮ ಕುಟುಂಬಕ್ಕೆ ಸೇರಿದ್ದಾರೆ.




# ನಮ್ಮೊಂದಿಗೆ ಆಚರಿಸಿ



**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**



**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**
**ಮೊಬೈಲ್: 9902334941**

"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು;
ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ." ಜ್ಞಾನೋಕ್ತಿ 22:9.

---

## ನಗೆಹನಿಗಳು

ಗುಂಡ : ಕಸ್ಟಮರ್ ಕೇರ್ ಅಲ್ವಾ?
ಹುಡುಗಿ : ಹೌದು
ಗುಂಡ : ನನ್ನ ಮಗ ಸಿಮ್ ಕಾರ್ಡ್ ನುಂಗಿದ್ದಾನೆ.
ಹುಡುಗಿ : ಅದಕ್ಕೆ ನಾವೇನು ಮಾಡಬೇಕು?
ಗುಂಡ : ಅವನು ಮಾತಾಡಿದ್ರೆ ದುಡ್ಡುಕಟ್ ಆಗುತ್ತೆ???

ಏರ್‌ಪೋರ್ಟ್ ಹೋಗೋದಕ್ಕೆ ಎಷ್ಟು ?
200 ರೂಪಾಯಿ. ಲಾಗೇಜ್‌ಗೆ ?
ಲಾಗೇಜ್‌ಗೆ ಫ್ರೀ ಹಾಗಿದ್ದರೆ ನೀನು ಲಾಗೇಜ್ ತಗೊಂಡು ಹೋಗು.
ನಾನು ಬಸ್ಸ್‌ನಲ್ಲಿ ಬರ್ತೀನಿ.

ಕನ್ನಡ ಮೇಸ್ಟ್ರು : ಕ ಇರೋದು ಕೊ ಆಗಬೇಕಾದರೆ ಕೊಂಬು ಕೊಡ್ಬೇಕು ಅರ್ಥ ಆಯ್ತಾ ಮಕ್ಕಳೇ.
ಗುಂಡ : ಹಾಗಾದ್ರೆ ಚ ಇರೋದು ಚೊ ಆಗ್ಬೇಕಾದ್ರೆ ಚೊಂಬು ಕೊಡ್ಬೇಕಾ ಸಾರ್....

ಕರ್ತನ ಚಿತ್ತದ ವಿಷಯವಾದ ತಿಳುವಳಿಕೆಯಿಂದ ತುಂಬಿಕೊಂಡು ಆತನಿಗೆ ಯೋಗ್ಯರಾಗಿ ನಡೆದು ಎಲ್ಲಾ ವಿಧದಲ್ಲಿ ಆತನನ್ನು ಸಂತೋಷಪಡಿಸಿರಿ (ಕೊಲೊ. 1:10).



## ಆರೋಗ್ಯ ಸ್ವರ

**ಸೌತೆಕಾಯಿ** ಸೇವನೆ ಆರೋಗ್ಯಕ್ಕೆ ಮತ್ತು ಸೌಂದರ್ಯಕ್ಕೆ ತುಂಬಾ ಒಳ್ಳೆಯದು. ಸೌತೆಕಾಯಿಯಿಂದ ಫೇಶಿಯಲ್ ಮಾಡಿ ಮುಖದಲ್ಲಿರುವ ಕಪ್ಪು ಕಲೆಯನ್ನು ಹೋಗಲಾಡಿಸಬಹುದು. ಸೌತೆಕಾಯಿ ಡಯೆಟ್ ಮಾಡಿ ತೆಳ್ಳಗಾಗಬಹುದು, ಈ ಸೌತೆಕಾಯಿ ಡಯೆಟ್ ಬಗ್ಗೆ ತಿಳಿದುಕೊಳ್ಳಲು ಮುಂದೆ ಓದಿ.

ಸೌತೆಕಾಯಿಯ ಉಪಯೋಗ :– ಸೌತೆಕಾಯಿಯಲ್ಲಿ 95% ನೀರು ಮತ್ತು ನಾರಿನಂಶವನ್ನು ಹೊಂದಿರುವುದರಿಂದ ಇದು ದೇಹವನ್ನು ಕ್ಲೆನ್ಸ್ ಮಾಡುತ್ತದೆ, ಇದು ದೇಹಕ್ಕೆ ನೀರಿನಂಶವನ್ನು ಪೂರೈಸುವುದರ ಜೊತೆಗೆ ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ. ಇದು ದೇಹವನ್ನು ತಂಪಾಗಿ ಇಡುವುದರ ಜೊತೆಗೆ ತ್ವಚ್ಛೆಯ ಪೋಷಣೆಗೂ ಸಹಾಯ ಮಾಡುತ್ತದೆ. ಇದರ ಸೇವನೆ ಕಣ್ಣಿಗೂ ತುಂಬಾ ಒಳ್ಳೆಯದು.

ಜೀರ್ಣಶಕ್ತಿ ಹೆಚ್ಚಳ ಮತ್ತು ಉತ್ತಮ ನಿದ್ರೆ. ಸೌತೆಕಾಯಿಯನ್ನು ಸಿಪ್ಪೆ ಸಹಿತ ಕತ್ತರಿಸಿ ಕಾಳುಮೆಣಸಿನ ಪುಡಿ ಮತ್ತು ಉಪ್ಪಿನೊಂದಿಗೆ ಸೇರಿಸಿಕೊಂಡು ತಿನ್ನುತ್ತಾ ಬಂದರೆ ಜೀರ್ಣಶಕ್ತಿ ಹೆಚ್ಚುವುದು. ಸೌತೆಕಾಯಿ ತಿರುಳಿನಿಂದ ಅಂಗಾಲು ಉಜ್ಜಿಕೊಂಡರೆ ಕಣ್ಣುಗಳ ಉರಿ ಶಾಂತವಾಗಿ ಚೆನ್ನಾಗಿ ನಿದ್ದೆ ಬರುತ್ತದೆ. ಮುಖದ ಮೇಲೆ ಸೌತೆಕಾಯಿ ಚೂರುಗಳನ್ನು ತಿಕ್ಕಿದರೆ ಮುಖ ಕಾಂತಿಯುತ್ತವಾಗುವುದು.

ಸೌತೆಕಾಯಿ ಡಯೆಟ್ ವಿಧಾನ :–

ಬೆಳಗ್ಗೆ : ಒಂದು ಗೋಧಿಯ ಬ್ರೆಡ್ ಮತ್ತು ಜಾಮ್, ಒಂದು ಬಟ್ಟಲು ಸೌತೆಕಾಯಿ ಸಲಾಡ್, ಒಂದು ಬಿಸಿ ಕಪ್ ಟೀ ಇದನ್ನು ಬೆಳಗಿನ ತಿಂಡಿಯ ಬದಲು ಸೇವಿಸಬೇಕು.

ಮಧ್ಯಾಹ್ನ : ಬೇಯಿಸಿದ ಮೊಟ್ಟೆ ಅಥವಾ ಕಡಿಮೆ ಕೊಬ್ಬಿನ ಚಿಕ್ಕನ್, ಬ್ರೆಡ್ ಮತ್ತು ಸೌತೆಕಾಯಿ ಸಲಾಡ್ ಅನ್ನು ಮಧ್ಯಾಹ್ನ ಉಪಹಾರವಾಗಿ ಸೇವಿಸಬಹುದು.

ಸ್ನ್ಯಾಕ್ಸ್ : ಸೇಬು, ಬಾಳೆಹಣ್ಣು, ಬಾಳೆಹಣ್ಣಿನ ಜ್ಯೂಸ್ ಸೇವಿಸಬಹುದಾಗಿದೆ.

ರಾತ್ರಿ ಊಟ ;– ಬರೀ ಸಲಾಡ್ ಮಾತ್ರ ಸೇವಿಸಬೇಕು.

## ಹಳ್ಳಿ ಮದ್ದು

**ಹೀರೆಕಾಯಿ :**

- ಮೂಲವ್ಯಾಧಿಯಿಂದ ಸಂಕಟ ಪಡುತ್ತಿರುವವರು ಹೀರೆಕಾಯಿ ಗಿಡದ ಬೇರನ್ನು ನುಣ್ಣಗೆ ಅರೆದು ಮೂಲದ ಮೊಳಕೆಗೆ ದಿನವೂ ಹೆಚ್ಚುತ್ತಾ ಇದ್ದರೆ ಗುಣವಾಗುತ್ತದೆ.
- ಹೀರೆಕಾಯಿಯನ್ನು ಆಹಾರದಲ್ಲಿ ತಿನ್ನುವುದರಿಂದ ಪಿತ್ತಜ್ವರವು ಪರಿಹಾರವಾಗುವುದು ಮತ್ತು ಕೆಮ್ಮು ಗುಣವಾಗುವುದು.
- ಹೀರೆಕಾಯಿಯನ್ನು ಅಡುಗೆಯಲ್ಲಿ ದಿನವೂ ಬಳಸಿದರೆ ಮೂಗಿನಲ್ಲಿ ರಕ್ತ ಸೋರುತ್ತಿದ್ದರೆ ನಿಲ್ಲುತ್ತದೆ.
- ದೇಹದ ಮೇಲೆ ಆದ ಗಾಯಗಳಿಗೆ ಹೀರೆಕಾಯಿ ಗಿಡದ ಹಸಿ ಎಲೆಗಳನ್ನು ನುಣ್ಣಗೆ ಅರೆದು ಗಾಯದ ಮೇಲೆ ಹಚ್ಚುತ್ತಾ ಇದ್ದರೆ ಗಾಯ ಶೀಘ್ರವಾಗಿ ವಾಸಿಯಾಗುತ್ತದೆ.
- ಮಧುಮೇಹ ರೋಗಿಗಳಿಗೆ ದಿನವೂ ಹೀರೆಕಾಯಿಯ ಪಲ್ಯವನ್ನು ಸೇವಿಸುವುದರಿಂದ ಅವರ ರೋಗ ನಿಯಂತ್ರಣಕ್ಕೆ ಬರುವುದು.

ಸಂಗ್ರಹ.

ಆಕಾಶವು ದೇವರ ಪ್ರಭಾವವನ್ನು ಪ್ರಚುರಪಡಿಸುತ್ತದೆ.
ಗಗನವು ಆತನ ಕೈಕೆಲಸವನ್ನು ತಿಳಸುತ್ತದೆ (ಕೀರ್ತ. 19:1).

# ಡಿಜಿಎಮ್ ಬೇತೇಲ್ 24 ಗಂಟೆಯ ಪ್ರಾರ್ಥನಾ ಗೋಪುರ

ಪ್ರತಿ ಸೋಮವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಮಧ್ಯಸ್ಥಿಕೆಯ ಪ್ರಾರ್ಥನೆ.**

ಪ್ರತಿ ಬುಧುವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಸ್ವಸ್ಥತೆಯ ಪ್ರಾರ್ಥನೆ.**

ಪ್ರತಿ ಶನಿವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಸ್ವಸ್ಥತೆ ಹಾಗೂ ಬಿಡುಗಡೆಯ ಪ್ರಾರ್ಥನೆ.**

ಪ್ರಾರ್ಥನಾ ಗೋಪುರದ ವಿಳಾಸ :

**ಡಿಜಿಎಮ್ ಬೇತೇಲ್ 24 ಗಂಟೆಯ ಪ್ರಾರ್ಥನಾ ಗೋಪುರ,**
**ರಕ್ಷಣಾಪುರ ಕಂಪೌಂಡ್, ಇನ್ನಂಜೆ ಗ್ರಾಮ, ಉಡುಪಿ –574115.**

## ವಿಶ್ವಾಸದಮನೆಗೆ ಬೇಟಿ ನೀಡಿದವರ ಅನಿಸಿಕೆಗಳು :–

ಈ ದಿನ ಕಾಪು ಮಹಿಳಾ ಕಾಂಗ್ರೆಸ್ ಮತ್ತು ಜಿಲ್ಲಾ ಮಕ್ಕಳ ಕಾಂಗ್ರೆಸ್ ಜಂಟಿಯಾಗಿ ದಿ। ರಾಜೀವ್‌ಗಾಂಧಿ ಜನ್ಮದಿನ ಮತ್ತು ದಿ। ದೇವರಾಜ ಅರಸು ಜನ್ಮ ದಿನವನ್ನು ವಿಶ್ವಾಸದಮನೆಯಲ್ಲಿ ಆಚರಿಸಿದೆವು. ಸಹ ಭೋಜನದೊಂದಿಗೆ ನಡೆದ ಕಾರ್ಯಕ್ರಮ ತುಂಬಾ ಅರ್ಥಪೂರ್ಣವಾಗಿತ್ತು. ವಿಶ್ವಾಸದಮನೆಯಲ್ಲಿ ನಡೆಯುವ ನಿರ್ಗತಿಕರು, ಮಾನಸಿಕ ರೋಗಿಗಳು, ವೃದ್ಧರು, ಮಹಿಳೆಯರು, ಅಂಗವೀಕಲರು ಹಾಗೂ ಮಕ್ಕಳ ಸೇವೆ ನಿಜವಾಗಿ ಶ್ಲಾಘನೀಯ. ಇದೊಂದು ದೈವತ್ ಕಾರ್ಯ ಎಂದು ನಾವು ಭಾವಿಸುತ್ತೇವೆ. ಈ ಸೇವೆಗೆ ನಿಜವಾಗಿ ಸಹೃದಯಿಗಳ ಸಹಕಾರ ಅತೀ ಅಗತ್ಯ. ಭಗವಂತನು ಶ್ರೀ ಸುನಿಲ್ ಪಾಸ್ಟರ್ ಕುಟುಂಬ ಮತ್ತು ಇಲ್ಲಿ ಸೇವೆ ನೀಡುವಂತಹ ಎಲ್ಲಾ ಸಿಬ್ಬಂದಿಗಳಿಗೆ ನೆಮ್ಮದಿ, ಸಂತೋಷವನ್ನು ಕರುಣಿಸಲಿ ಎಂದು ಹಾರೈಸುತ್ತೇವೆ.

**ವೆರೋನಿಕಾ ಕರ್ನೇಲಿಯೋ**
ಜಿಲ್ಲಾ ಮಹಿಳಾ ಕಾಂಗ್ರೆಸ್
ಅಧ್ಯಕ್ಷೆ– ಉಡುಪಿ.

ನಮ್ಮ ಕರ್ತನಾದ ಯೆಹೋವನೇ, ನಿನ್ನ ನಾಮವು ಭೂಲೋಕದಲ್ಲೆಲ್ಲಾ ಎಷ್ಟೋ ಮಹಿಮೆಯುಳ್ಳದ್ದು (ಕೀರ್ತ. 8:1).

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/– | ಆರು ತಿಂಗಳಿಗೊಮ್ಮೆ | ರೂ. 6000/– |
| ಮೂರು ತಿಂಗಳಿಗೊಮ್ಮೆ | ರೂ. 2000/– | ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 9902334941**

---

## ನಿಮ್ಮಗೆಲ್ಲಾ ಸಂತಸ ಸುದ್ದಿ

# VOICE OF GOD
## (ದೇವರ ಸ್ವರ)

ಈಗಾಗಲೇ VOICE OF GOD ಆಂಗ್ಲ ಮಾಸ ಪತ್ರಿಕೆಯು ಪ್ರಕಟವಾಗಿರುತ್ತದೆ. ಇದನ್ನು ಬಯಸುವವರು ನಿಮ್ಮ ವಿಳಾಸ ನಮಗೆ ಬರೆದು ಕಳುಹಿಸಿ ರೂ. 150 ವಾರ್ಷಿಕ ಚಂದಾ ಹಣವನ್ನು ಭರಿಸಬಹುದು. ದಯಮಾಡಿ ತಾವೆಲ್ಲರೂ ಈ ಮಾಸ ಪತ್ರಿಕೆಗಾಗಿ ಪ್ರಾರ್ಥಿಸಬೇಕು ಹಾಗೂ ತಮ್ಮಿಂದ ಆಗುವ ಸಹಕಾರವನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ ನಿಮ್ಮ ನೆಚ್ಚಿನ ಸ್ನೇಹಿತರು, ಬಂಧುಗಳ ವಿಳಾಸವನ್ನು ನಮಗೆ ಕಳುಹಿಸಿ ಅವರ ವಾರ್ಷಿಕ ಚಂದಾವನ್ನು ತಾವು ಭರಿಸಿದ್ದಾಗಿದಲ್ಲಿ ಅವರೆಲ್ಲರೂ ಆತ್ಮೀಕ ಪ್ರಯೋಜನ ಪಡೆದುಕೊಳ್ಳಲು ಸಾಧ್ಯ. ಪರಲೋಕದಿಂದ ತಾವೆಲ್ಲರೂ ಪ್ರತಿಫಲ ಹೊಂದಿಕೊಳ್ಳುವಿರಿ. ತಮ್ಮ ಪ್ರತಿಗಳನ್ನು ಕಾಯ್ದಿರಿಸಿಕೊಳ್ಳಿ.

---

**ಆಶ್ರಮದ ಅವಶ್ಯಕತೆಗಳು**

1. ವಾಷಿಂಗ್ ಮಿಷನ್ (500ಕೆ.ಜಿ.).
2. ಜನರೇಟರ್
3. 100 ಮಂಚ, ಹೊದಿಕೆಗಳು 100, ತಲೆದಿಂಬು 100, ಬೆಡ್‌ಶೀಟ್.
4. ಕುಡಿಯವ ನೀರಿನ ಫಿಲ್ಟರ್.

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781, 09964070654.**

ಯೆಹೋವನು ದೊಡ್ಡವನು ಬಹಳವಾಗಿ ಸ್ತುತ್ಯನೂ ಆಗಿದ್ದಾನೆ.
ಎಲ್ಲಾ ದೇವರುಗಳಲ್ಲಿ ಆತನೇ ಭಯಂಕರನು (ಕೀರ್ತ. 96:4).

# ನೀತಿವಂತನ ಆಶೀರ್ವಾದಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ದೀಕ್ಷಾಸ್ನಾನಗಳಲ್ಲಿ ಅನೇಕ ವಿಧವಾದ ದೀಕ್ಷಾಸ್ನಾನಗಳಿರುವದನ್ನು ಸತ್ಯವೇದದಲ್ಲಿ ನಾವು ಕಾಣಬಹುದು.

1) **ಇಸ್ರಾಯೇಲರ ಕೆಂಪು ಸಮುದ್ರ ಮತ್ತು ಮೇಘದ ಮೂಲಕವಾದ ದೀಕ್ಷಾಸ್ನಾನ** (1 ಕೊರಿ. 10:1–2).

2) **ಸ್ನಾನಿಕ ಯೋಹಾನನ ದೀಕ್ಷಾಸ್ನಾನ** (ಇದು ದೇವರ ಕಡೆಗೆ ತಿರುಗಿಕೊಂಡವರಿಗೆ ಮಾತ್ರ ಕೊಡಲ್ಪಡುವ ದೀಕ್ಷಾಸ್ನಾನ ಅ.ಕೃ. 13:24, ಮತ್ತಾ. 3:5–8 ಮಾತ್ರವಲ್ಲದೆ ಇದು ಪಂಚಶತ್ತಮ ದಿನದಂದು ಹೊಸ ಒಡಂಬಡಿಕೆಯ ಸಭೆ ಸ್ಥಾಪನೆಯಾಗುವವರೆಗೆ ಮಾತ್ರ ಆಚರಣೆಯಲ್ಲಿತ್ತು ನಂತರ ಇದಕ್ಕೆ ಯಾವುದೇ ಮಹತ್ವವಿಲ್ಲ).

3) **ಹೊಸ ಒಡಂಬಡಿಕೆಯ ದೀಕ್ಷಾಸ್ನಾನ** (ಮತ್ತಾ. 28:18–20, ಅ.ಕೃ. 2:37–39,41 ತಂದೆ ಮಗ ಪವಿತ್ರಾತ್ಮನ ಹೆಸರಿನಲ್ಲಿ ರಕ್ಷಣೆ ಹೊಂದಿದವರು ತೆಗೆದುಕೊಳ್ಳಲ್ಪಡುವ ದೀಕ್ಷಾಸ್ನಾನ).

4) ಲೂಕ. 12:50 ಈ ದೀಕ್ಷಾಸ್ನಾನ ಕಷ್ಟದ, ಬಾಧೆಯ ದೀಕ್ಷಾಸ್ನಾನ. ಕರ್ತನಾದ ಯೇಸುವನ್ನು ರಕ್ಷಕನು ಒಡೆಯನೆಂದು ಯಾರು ಅಂಗೀಕರಿಸಿ ರಕ್ಷಣೆ ಹೊಂದುತ್ತಾರೋ ಅಂಥ ವ್ಯಕ್ತಿಗಳಿಗೆ ಈ ಲೋಕದ ಮೂಲಕ ಬರುವ ನಿಂದೆ, ಅವಮಾನ ಹಿಂಸೆಯಾಗಿದೆ. ಯೇಸುಸ್ವಾಮಿ ತನ್ನ ಶಿಲುಬೆಯ ಹಾದಿ ಮತ್ತು ಶಿಲುಬೆಯ ಘೋರ ಮರಣವನ್ನು ಸೂಚಿಸಿ ಹೇಳಿದನು. ಲೂಕ. 9:23–24 ರಲ್ಲಿ "ಇದಲ್ಲದೆ ಆತನು ಎಲ್ಲರಿಗೂ ಹೇಳಿದ್ದೇನೆಂದರೆ ಯಾವನಿಗಾದರೂ ನನ್ನ ಹಿಂದೆ ಬರುವುದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ದಿನಾಲೂ ಹೊತ್ತುಕೊಂಡು ನನ್ನ ಹಿಂದೆ ಬರಲಿ. ತನ್ನ ಪ್ರಾಣವನ್ನು ಉಳಿಸಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಉಳಿಸಿಕೊಳ್ಳುವನು".

5) ಮತ್ತಾ. 3:11, ಮಾರ್ಕ. 1:8, ಲೂಕ. 3:16, ಅ.ಕೃ.1:3–5 ರಕ್ಷಣೆ ಹೊಂದಿದ ಪ್ರತಿಯೊಬ್ಬರು ಪವಿತ್ರಾತ್ಮನ ಸ್ನಾನವನ್ನು ಪಡಕೊಳ್ಳುವುದಾಗಿದೆ. ಅ.ಕೃ. 2:1–5, ಅ.ಕೃ. 1:8 ಪವಿತ್ರಾತ್ಮನು ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟ ಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು.

6) **ಮೂಢತ್ವದ ದೀಕ್ಷಾಸ್ನಾನ** : 1 ಕೊರಿ. 15:29 ಕೊರಿಂಥದಲ್ಲಿ ಒಂದು ಗುಂಪು ಜನರಿದ್ದರು. ಅವರು ಸತ್ತಂತಹ ತಮ್ಮ ಬಂಧುಗಳಿಗಾಗಿ ದೀಕ್ಷಾಸ್ನಾನ ತೆಗೆದುಕೊಂಡರೆ ಅವರಿಗೆ ಪುನರುತ್ಥಾನವಾಗುತ್ತದೆ ಎಂಬ ಮೂಢ ನಂಬಿಕೆ ಅವರಲ್ಲಿತ್ತು ಆದರೆ ಪೌಲನು ಕರ್ತನಾದ ಯೇಸುಕ್ರಿಸ್ತನಲ್ಲಿ ಸತ್ತಂತವರಿಗೆ ಪುನರುತ್ಥಾನ ಇದೆ ಎಂಬ ಬಲವಾದ ಸಾಕ್ಷಿಯನ್ನು ಅವರು ತೆಗೆದುಕೊಳ್ಳುವ ಮೂಢತ್ವದ ದೀಕ್ಷಾಸ್ನಾನವನ್ನು ಆಧರಿಸಿ ಅವರಿಗೆ ವಿವರಿಸಿದನು.

7) ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಇದು ಯೇಸುನಾಮದವರು ಕೇವಲ ಅಪೋಸ್ತಲರ ಕೃತ್ಯದಲ್ಲಿರುವ 3 ವಚನಗಳನ್ನು ಆಧಾರ ಮಾಡಿಕೊಂಡು ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಎಂದು ಬೋಧಿಸಿ ಶ್ರೇಯಕತ್ವವನ್ನು ಅಲ್ಲಗಳೆಯುತ್ತಾರೆ. (ಅ.ಕೃ. 2:38, 10:48,19:5) ಇದರ ಕುರಿತು ಸವಿಸ್ತಾರವಾಗಿ ಮುಂದಿನ ಪುಟಗಳಲ್ಲಿ ನಿಮಗೆ ವಿವರಿಸಿ ಹೇಳುತ್ತೇನೆ.

8) ಅ.ಕೃ. 19:1–7 ರಲ್ಲಿ ಪೌಲನಿಗೆ ಎಫೆಸದಲ್ಲಿ ಸಿಕ್ಕಿದ ಶಿಷ್ಯರು ಅಪೊಲ್ಲೋಸನ ಮೂಲಕ ರಕ್ಷಣೆ ಹೊಂದಿದ ವಿಶ್ವಾಸಿಗಳಾಗಿದ್ದರು. ಅವರು ಶಿಷ್ಯರಾಗಿದ್ದರೂ ಹೊಸ ಒಡಂಬಡಿಕೆಯ ಉಪದೇಶಗಳಲ್ಲಿ ಅಪೂರ್ಣರಾಗಿದ್ದರು. ಅವರಿಗೆ ಪವಿತ್ರಾತ್ಮನ ಕುರಿತು ತಿಳಿದೇ ಇರಲಿಲ್ಲ, ಪವಿತ್ರಾತ್ಮ ಸ್ನಾನವನ್ನು ಪಡೆದಿರಲಿಲ್ಲ, ಹೊಸ ಒಡಂಬಡಿಕೆಯ ದೀಕ್ಷಾಸ್ನಾನವನ್ನು ತೆಗೆದುಕೊಂಡಿರಲಿಲ್ಲ. ಕಾರಣ ಅವರನ್ನು ಸತ್ಯಕ್ಕೆ ನಡೆಸುವ ಅವರ ಬೋಧಕನಾದ ಅಪೊಲ್ಲೋಸನಿಗೂ ಹೊಸ ಒಡಂಬಡಿಕೆಯ ಅನೇಕ ಸತ್ಯಗಳು ತಿಳಿದಿರಲಿಲ್ಲ. "ಅಷ್ಟರೊಳಗೆ ಅಲೆಕ್ಸಾಂದ್ರಿಯದಲ್ಲಿ ಹುಟ್ಟಿದ ಅಪೊಲ್ಲೋಸನೆಂಬ ಒಬ್ಬ ಯೆಹೂದ್ಯನು ಎಫೆಸಕ್ಕೆ ಬಂದನು. ಅವನು ವಾಕ್ಚಾತುರ್ಯವುಳ್ಳವನು, ಶಾಸ್ತ್ರಗಳಲ್ಲಿ ಪ್ರವೀಣನು. ಅವನು ಕರ್ತನ ಮಾರ್ಗದ ವಿಷಯದಲ್ಲಿ ಉಪದೇಶ ಹೊಂದಿದವನಾಗಿದ್ದನು; ಮತ್ತು ಆಸಕ್ತ ಮನಸ್ಸುಳ್ಳವನಾಗಿದ್ದು ಯೋಹಾನನು ಮಾಡಿಸಿದ ದೀಕ್ಷಾಸ್ನಾನವನ್ನು ಮಾತ್ರ ಬಲ್ಲವನಾದಾಗ್ಯೂ ಯೇಸುವಿನ ಸಂಗತಿಗಳನ್ನು ಸೂಕ್ಷ್ಮವಾಗಿ ಹೇಳಿ ಉಪದೇಶಿಸಿದನು. ಅವನು ಸಭಾಮಂದಿರದಲ್ಲಿ ಧೈರ್ಯದಿಂದ ಮಾತಾಡುವದಕ್ಕೆ

ಯೆಹೋವನೇ, ನನ್ನ ದೇವರೇ ನೀನು ಸರ್ವೋತ್ಕೃಷ್ಟನು, ಪ್ರಭಾವ ಮಹತ್ವಗಳಿಂದ ಭೂಷಿತನಾಗಿದ್ದೀ (ಕೀರ್ತ. 104:1).

ಪ್ರಾರಂಭಿಸಿದನು. ಅವನ ಮಾತುಗಳನ್ನು ಪ್ರಿಸ್ಕಿಲ್ಲಳೂ ಅಕ್ವಿಲನೂ ಕೇಳಿ ಅವನನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ದೇವರ ಮಾರ್ಗವನ್ನು ಅವನಿಗೆ ಇನ್ನೂ ಸೂಕ್ಷ್ಮವಾಗಿ ವಿವರಿಸಿದರು" (ಅ.ಕೃ. 18:24–26). ಅಪೊಲ್ಲೋಸನು ಹೊಸ ಒಡಂಬಡಿಕೆಯ ಅರ್ಧ ಸತ್ಯ ತಿಳುಕೊಂಡಿದ್ದನು. ಬೇರೆ ಯಾರಾದರೂ ಹೇಳುವುದನ್ನು ಕೇಳುವುದಕ್ಕೆ ಮನಸ್ಸಿತ್ತು, ತಿದ್ದಿಕೊಳ್ಳಲು ಮನಸ್ಸುಳ್ಳವನಾಗಿದ್ದನು ಅದಕ್ಕಾಗಿ ಕರ್ತನಿಗೆ ಸ್ತೋತ್ರವನ್ನು ಸಲ್ಲಿಸಬೇಕು ಮಾತ್ರವಲ್ಲದೆ ಅವನ ಶಿಷ್ಯರು ಕೂಡ ಕೇಳುವ ಮನಸ್ಸುಳ್ಳವರಾಗಿದ್ದರು. ಆದರೆ ಇಂದು ಅನೇಕರು ಅರ್ಧ ಸತ್ಯ ತಿಳಿದು ದುಬೋರ್ಧನಾ ಗುಂಪಿನವರು ವಾಗ್ವಾದ ಪ್ರಿಯರಾಗಿರುತ್ತಾರೆ. "ಆದರೆ ಬುದ್ಧಿಯಿಲ್ಲದ ವಿತರ್ಕಗಳಿಗೂ ವಂಶಾವಳಿಗಳಿಗೂ ಜಗಳಗಳಿಗೂ ಧರ್ಮಶಾಸ್ತ್ರದ ವಿಷಯವಾದ ವಾಗ್ವಾದಗಳಿಗೂ ದೂರವಾಗಿರು; ಅವು ನಿಷ್ಪ್ರಯೋಜನವೂ ವ್ಯರ್ಥವೂ ಆಗಿವೆ" (ತೀತ. 3:9). "ಈ ಸಂಗತಿಗಳನ್ನು ಸಭೆಯವರ ಜ್ಞಾಪಕಕ್ಕೆ ತರಬೇಕು. ಕೇಳುವವರಿಗೆ ಕೇಡನ್ನುಂಟುಮಾಡುವದೇ ಹೊರತು ಯಾವ ಪ್ರಯೋಜನಕ್ಕೂ ಬಾರದ ವಾಗ್ವಾದಗಳನ್ನು ಮಾಡಬಾರದೆಂದು ಅವರಿಗೆ ದೇವರ ಸನ್ನಿಧಿಯಲ್ಲಿ ಖಂಡಿತವಾಗಿ ಹೇಳು" (2 ತಿಮೊ. 2:14). "ಮೂಢರ ಬುದ್ಧಿಯಿಲ್ಲದ ವಿಚಾರಗಳು ಜಗಳಗಳಿಗೆ ಕಾರಣವಾಗಿವೆ ಎಂದು ತಿಳಿದು ಅವುಗಳ ಗೊಡವೆಗೆ ಹೋಗಬೇಡ" (2 ತಿಮೊ. 2:23). "ಯಾವನಾದರೂ ಬೇರೆ ವಿಧವಾದ ಉಪದೇಶವನ್ನು ಮಾಡಿ ನಮ್ಮ ಕರ್ತನಾದ ಯೇಸುಕ್ರಿಸ್ತನ ಸ್ವಸ್ಥವಾದ ಮಾತುಗಳಿಗೂ ಭಕ್ತ್ಯನುಸಾರವಾದ ಉಪದೇಶಕ್ಕೂ ಸಮ್ಮತಿಸದೆ ಹೋದರೆ ಅವನು ಒಂದನ್ನೂ ತಿಳಿಯದೆ ಕುತರ್ಕ ವಾಗ್ವಾದಗಳನ್ನು ಮಾಡುವ ಭ್ರಾಂತಿಯಲ್ಲಿದ್ದು ಮದದಿಂದ ಕಣ್ಣು ಗಾಣದವನಾಗಿದ್ದಾನೆ. ಇವುಗಳಿಂದ ಹೊಟ್ಟೇಕಿಚ್ಚು ಜಗಳ ದೂಷಣೆ ದುಸ್ಸಂಶಯ ಇವುಗಳು ಉಂಟಾಗುತ್ತವೆ. ಇದಲ್ಲದೆ ಬುದ್ಧಿಗೆಟ್ಟು ಸತ್ಯವಿಹೀನರಾಗಿದ್ದು ದೇವ ಭಕ್ತಿಯನ್ನು ಲಾಭಸಾಧನವೆಂದೆಣಿಸುವ ಈ ಮನುಷ್ಯರಲ್ಲಿ ನಿತ್ಯವಾದ ಕಚ್ಚಾಟಗಳು ಉಂಟಾಗುತ್ತವೆ" (1 ತಿಮೊ. 6:3–5).

1 ತಿಮೊ. 1:3–10 ರಲ್ಲಿ ಸಹ ನಾವು ಕಾಣಬಹುದು. ಇಂದು ಅರ್ಧ ಸತ್ಯ ಗೊತ್ತಿರುವ ಅನೇಕ ಬೋಧಕರು ತಮ್ಮ ತಪ್ಪಾದ ಉಪದೇಶಗಳಿಂದ ಕ್ರೈಸ್ತ ವಿಶ್ವಾಸಿಗಳನ್ನು ದಾರಿ ತಪ್ಪಿಸುವಂತದ್ದನ್ನು ನಾವು ಕಾಣಬಹುದು. ಯೇಸು ನಾಮದವರು, ಯೆಹೋವನ ಸಾಕ್ಷಿಗಳು ಹೀಗೆ ಅನೇಕ ಅರ್ಧ ಸತ್ಯ ತಿಳಿದಿರುವವರು ಮುಗ್ಧರಾದ ಕರ್ತನಲ್ಲಿ ಬೆಳೆಯುತ್ತಿರುವಂತಹ ಕ್ರೈಸ್ತ ವಿಶ್ವಾಸಿಗಳನ್ನು ತಮ್ಮ ಎದುರು ಉಪದೇಶಗಳ ಮೂಲಕ ದಾರಿ ತಪ್ಪಿಸುವುದನ್ನು ಕಾಣಬಹುದು. ಯಾಕೋ. 3:1 ರಲ್ಲಿ "ನನ್ನ ಸಹೋದರರೇ, ಬೋಧಕರಾದ ನಿಮಗೆ ಕಠಿನವಾದ ತೀರ್ಪು ಆಗುವದೆಂದು ತಿಳಿದುಕೊಂಡು ಬಹುಮಂದಿ ಬೋಧಕರಾಗಬೇಡಿರಿ". ಲೂಕ. 10:25–29ರಲ್ಲಿ ಒಬ್ಬ ಧರ್ಮೋಪದೇಶಕನು ಯೇಸುವಿನ ಬಳಿಗೆ ಬಂದು ತಾನು ನಿತ್ಯ ಜೀವಕ್ಕೆ ಬಾಧ್ಯನಾಗಬೇಕಾದರೆ ಏನು ಮಾಡಬೇಕು ಎಂದು ಕೇಳುವುದನ್ನು ಗಮನಿಸಬಹುದು. ಈತನು ಒಬ್ಬ ಬೋಧಕನು ಆದರೆ ಈತನಿಗೆ ನಿತ್ಯಜೀವಕ್ಕೆ ಬಾಧ್ಯನಾಗವುದರ ಕುರಿತು ತಿಳಿದಿಲ್ಲ. ಈತನು ಬೋಧಕನಾಗಿದ್ದರೂ ತನ್ನ ನೆರೆಯವನು ಯಾರು ಗೊತ್ತಿಲ್ಲ, ಎಂಥ ದು:ಖಕರ ಸಂಗತಿಯಾಗಿದೆ. ಜನರಿಗೆ ಈತನು ಏನು ಬೋಧನೆ ಮಾಡುತ್ತಿರಬಹುದು? 5 ವರ್ಷಗಳ ಹಿಂದೆ ನನ್ನ ಪತಿಯವರು ದುಬೈಗೆ ಹೋದಾಗ ಕಿಂಗ್ ರಿವೈವಲ್ ಸಭೆಯ ಪಾಲಕರಾದ ಪಾ॥ ದಿಲ್ ಕುಮಾರ್‌ರವರು ನನ್ನ ಪತಿಗೆ ನೀವು ಅನೇಕ ದೇಶಗಳಿಗೆ ಸುವಾರ್ತ ಸೇವೆಯ ನಿಮಿತ್ತ ಹೋಗುತ್ತೀರಲ್ಲ ಕ್ರೈಸ್ತ ಸಭೆಯಲ್ಲಿ ಏನಾದರೂ ವಿಶೇಷತೆ ಕಂಡಿದ್ದೀರಾ ಎಂದು ಕೇಳಿದರು. ಅದಕ್ಕೆ ನನ್ನ ಪತಿಯವರು ಗಲ್ಫ್ ರಾಷ್ಟ್ರದ ಸಭೆಗಳಲ್ಲಿ ವಿಶ್ವಾಸಿಗಳು ಕಡಿಮೆ ಆದರೆ ಬೋಧಕರು ಹೆಚ್ಚಾಗಿದ್ದಾರೆ ಎಂದು ಹೇಳಿದೆ. ಆದುದರಿಂದ ಅಪೂರ್ಣ ಸತ್ಯ ಗೊತ್ತಿರುವ ಅನೇಕರಿಂದ ದುರ್ಬೋಧನೆ ಪ್ರಕಟವಾಗುತ್ತದೆಂದು ನಾವು ತಿಳಿದುಕೊಳ್ಳಬೇಕು. "ಈ ಪುಸ್ತಕದ ಪ್ರವಾದನಾ ವಾಕ್ಯಗಳನ್ನು ಕೇಳುವ ಪ್ರತಿಯೊಬ್ಬನಿಗೆ ನಾನು ಹೇಳುವ ಸಾಕ್ಷಿ ಏನಂದರೆ ಇವುಗಳಿಗೆ ಯಾವನಾದರೂ ಹೆಚ್ಚು ಮಾತುಗಳನ್ನು ತಂದುಹಾಕಿದರೆ ದೇವರು ಅವನ ಮೇಲೆ ಈ ಪುಸ್ತಕದಲ್ಲಿ ಬರೆದಿರುವ ಉಪದ್ರವಗಳನ್ನು ತಂದುಹಾಕುವನು. ಯಾವನಾದರೂ ಈ ಪ್ರವಾದನಾ ಪುಸ್ತಕದಲ್ಲಿರುವ ಮಾತುಗಳಲ್ಲಿ ಒಂದನ್ನಾದರೂ ತೆಗೆದುಬಿಟ್ಟರೆ ಈ ಪುಸ್ತಕದಲ್ಲಿ ಬರೆದಿರುವ ಪರಿಶುದ್ಧ ಪಟ್ಟಣದಲ್ಲಿಯೂ ಜೀವವೃಕ್ಷದಲ್ಲಿಯೂ ಅವನಿಗಿರುವ ಪಾಲನ್ನು ದೇವರು ತೆಗೆದುಬಿಡುವನು". (ಪ್ರಕ. 22:18–19).

ಮುಂದುವರಿಯುವದು.........

**– ಪಾ॥ ಸುನಿಲ್ ಜಾನ್ ಡಿ'ಸೋಜಾ.**

ನಾನು ನಿನ್ನ ಸಂಗಡ ಇದ್ದು ನೀನು ಹೋಗುವ ಎಲ್ಲಾ ಸ್ಥಳಗಳಲ್ಲಿ
ನಿನ್ನನ್ನು ಕಾಪಾಡಿ ತಿರುಗಿ ಈ ದೇಶಕ್ಕೆ ಬರ ಮಾಡುತ್ತೇನೆ (ಆದಿ. 28:15).

# ಜಯದ ಜೀವಿತ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**"ನೀವು ನನ್ನಲ್ಲಿದ್ದು ಮನಶಾಂತಿಯನ್ನು ಹೊಂದಿದವರಾಗಿರಬೇಕೆಂದು ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ. ಲೋಕದಲ್ಲಿ ನಿಮಗೆ ಸಂಕಟ ಉಂಟು; ಧೈರ್ಯವಾಗಿರಿ, ನಾನು ಲೋಕವನ್ನು ಜಯಿಸಿದ್ದೇನೆ"** (ಯೋಹಾ. 16:33). ದೇವ ಮಗುವೆ ನೀವು ಮೇಲಿನ ವಾಕ್ಯವನ್ನು ಧ್ಯಾನಿಸುವುದಾದರೆ 2 ಮುಖ್ಯವಾದ ಸಂಗತಿಗಳು ಪ್ರಕಟವಾಗುವುದು. ಮೊದಲನೆಯದಾಗಿ ಕ್ರಿಸ್ತನಲ್ಲಿ ನಮಗೆ ಸಮಾಧಾನವಿದ್ದೇ ಇರುವುದು ಆದರೆ ಎರಡನೆಯದಾಗಿ ಲೋಕದಲ್ಲಿ ನಮಗೆ ಸಂಕಟಗಳು ಇದ್ದೇ ಇರುವುದು. ಹೂವು ಇದೆ, ಮುಳ್ಳುಗಳು ಇರುತ್ತವೆ, ಆನಂದವೂ ಇದೆ, ದು:ಖ ವೇದನೆಗಳು ಹಿಂದಟ್ಟಿ ಬರುವ ಸನ್ನಿವೇಶ ಬರಬಹುದು ಆದರೆ ಲೋಕದಲ್ಲಿ ನಮಗೆ ಕಷ್ಟ ಸಂಕಟಗಳು ಇದ್ದರೂ ಈ ಲೋಕವನ್ನು ನಮ್ಮ ಕರ್ತನಾದ ಯೇಸು ಜಯಿಸಿರುತ್ತಾನೆ. ಕ್ರಿಸ್ತನಲ್ಲಿ ಜೀವಿಸುವ ನಮಗೆ ಖಂಡಿತವಾಗಿಯೂ ಜಯ ಜಯವೇ. ದೇವ ಮಗುವೆ ನೀನು ಲೋಕದಲ್ಲಿ ಇದ್ದರೂ ಲೋಕದವನಂತೆ ಜೀವಿಸದೆ ಲೋಕದಿಂದ ಪ್ರತ್ಯೇಕಿಸಲ್ಪಡುವಿಯಾದರೆ ಕ್ರಿಸ್ತನ ಮೂಲಕ ಜಯದ ಜೀವಿತ ಜೀವಿಸಬಹುದಾಗಿದೆ. **"ಆದರೆ ದೇವರು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ನಮಗೆ ಜಯವನ್ನು ಕೊಟ್ಟಿದ್ದಾನೆ"** (1 ಕೊರಿ. 15:57). ಸತ್ಯವೇದವು ಯಾರು ಲೋಕವನ್ನು ಜಯಿಸಿದವರು ಎಂದು ಹೇಳುತ್ತದೆ ಎಂಬುವುದನ್ನು ನಾವು ಧ್ಯಾನಿಸೋಣ.

1) **ದೇವರಿಂದ ಹುಟ್ಟಿರುವಂಥದೆಲ್ಲವೂ ಲೋಕವನ್ನು ಜಯಿಸುತ್ತದೆ** :– (1 ಯೋಹಾ. 5:4). ದೇವರಿಂದ ಹುಟ್ಟಿದವನು ಯಾರೆಂದರೆ ಯೇಸು ಕ್ರಿಸ್ತನನ್ನು ನಂಬುವ ಪ್ರತಿಯೊಬ್ಬನು ದೇವರಿಂದ ಹುಟ್ಟಿದವನಾಗಿರುತ್ತಾನೆ. (1 ಯೋಹಾ. 5:1). ಕ್ರಿಸ್ತನನ್ನು ನಂಬುವವನು ದೇವರಿಗೆ ಸಂಬಂಧಪಟ್ಟವನಾಗಿರುತ್ತಾನೆ. ಎರಡನೆಯದಾಗಿ "ಪ್ರೀತಿ ಮಾಡುವ ಪ್ರತಿಯೊಬ್ಬನು ದೇವರಿಂದ ಹುಟ್ಟಿದವನೂ ದೇವರನ್ನು ಬಲ್ಲವನೂ ಆಗಿರುತ್ತಾನೆ" (1 ಯೋಹಾ. 4:7). ಪ್ರೀತಿಯಿಲ್ಲದವನು ದೇವರನ್ನು ಬಲ್ಲವನು ಅಲ್ಲ. ಏಕಂದರೆ ದೇವರು ಪ್ರೀತಿಸ್ವರೂಪನು, ಪ್ರೀತಿಯು ದೇವರಿಂದಾಗಿದೆ. ಪ್ರೀತಿಯನ್ನು ತಿಳಿಯದೆ ಇರುವವನು ದೇವರನ್ನು ತಿಳಿಯದೆ ಇರುವನು. ಮೂರನೆಯದಾಗಿ ಪಾಪದಿಂದ ಬೇರ್ಪಟ್ಟು ಜೀವಿಸುವವನು ದೇವರಿಂದ ಹುಟ್ಟಿದವನಾಗಿರುತ್ತಾನೆ. (1 ಯೋಹಾ. 3:9). ದೇವರಿಂದ ಹುಟ್ಟಿದವನು ಪಾಪವನ್ನು ಮಾಡುವವನಾಗಿರಲಾರನು. ಆದರೆ ಪಾಪವನ್ನು ಮಾಡುವವನು ಸೈತಾನನಿಂದ ಹುಟ್ಟಿದವನಾಗಿದ್ದಾನೆ ಎಂದು ಸತ್ಯವೇದ ಹೇಳುತ್ತದೆ (1 ಯೋಹಾ. 3:8). ಕ್ರಿಸ್ತನಲ್ಲಿ ಯಾವ ಪಾಪವೂ, ವಂಚನೆಯೂ ಇಲ್ಲ. ಆತನಲ್ಲಿ ನೆಲೆಗೊಂಡಿರುವವನು ಪಾಪ ಮಾಡಲಾರನು. ಪಾಪ ಮಾಡುವವನು ಆತನನ್ನು ಕಂಡವನೂ ಅಲ್ಲ, ತಿಳಿದವನೂ ಅಲ್ಲ. (1 ಯೋಹಾ. 3:6–7). ನಾಲ್ಕನೆಯದಾಗಿ ದೇವರ ವಾಕ್ಯಕ್ಕೆ ವಿಧೇಯನಾಗುವವನು ದೇವರಿಂದ ಹುಟ್ಟಿದವನು ಆಗಿರುತ್ತಾನೆ (1 ಯೋಹಾ. 4:6). ಸೌಲನು ದೇವರ ಮಾತಿಗೆ ಅವಿಧೇಯನಾದ್ದರಿಂದ ದೇವರಿಂದ ತಳ್ಳಲ್ಪಟ್ಟವನಾದನು. ದೇವರಿಂದ ಹುಟ್ಟಿದವನು ದೇವರೊಂದಿಗೆ ಅನ್ಯೋನ್ಯವಾಗಿ ಜೀವಿಸುತ್ತಾನೆ. ದೇವರ ಚಿತ್ತವನ್ನು ನೆರವೇರಿಸಲು ಮುಂದಾಗುವನು.

2) **ಲೋಕವನ್ನು ಜಯಿಸುವಂಥದ್ದು ನಮ್ಮ ನಂಬಿಕೆ** : (1 ಯೋಹಾ. 5:4). ದೇವರಿಂದ ಹುಟ್ಟಿದವನು ಲೋಕವನ್ನು ಜಯಿಸುವನು ಮಾತ್ರವಲ್ಲದೆ ನಂಬಿಕೆಯಿಂದ ಲೋಕವನ್ನು ಜಯಿಸುತ್ತೇವೆ. ಇಂದು ಅನೇಕರು ಕ್ರಿಸ್ತನಲ್ಲಿ ಬಂದು ಸೋತು ಬಿದ್ದು ಹೋಗುವರು ಕಾರಣ ನಂಬಿಕೆಯ ಕೊರತೆಯಿಂದಲೇ.

ಈ ಹೊತ್ತು ನೋಡಿದ ಐಗುಪ್ತ್ಯರನ್ನು ನೋಡುವದಿಲ್ಲ. ಯೆಹೋವನೇ ನಿಮಗಾಗಿ ಯುದ್ಧಮಾಡುವನು. ನೀವಂತೂ ಸುಮ್ಮನೇ ಇರ್ರಿ (ವಿಮೋ. 14:14).

"ಯೆಹೋವನಲ್ಲಿ ಭರವಸವಿಟ್ಟು ಒಳ್ಳೇಯದನ್ನು ಮಾಡು. ದೇಶದಲ್ಲಿ ವಾಸವಾಗಿದ್ದು ನಂಬಿಕೆಯನ್ನು ಅನುಸರಿಸು. ಆಗ ಯೆಹೋವನಲ್ಲಿ ಸಂತೋಷಿಸುವಿ ಮತ್ತು ಆತನು ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವನು. ಸೈತಾನನು ನಮ್ಮೊಳಗೆ ಅಪನಂಬಿಕೆಯನ್ನು ಹುಟ್ಟಿಸುತ್ತಾನೆ. "ನಿನ್ನಿಂದ ಪರಿಶುದ್ಧ ಜೀವಿತ ಜೀವಿಸಲು ಸಾಧ್ಯವಿಲ್ಲ. ನಿನ್ನ ಪ್ರಾರ್ಥನೆಗೆ, ಉಪವಾಸಕ್ಕೆ ಫಲ ಸಿಗುವುದಿಲ್ಲ. ಮೊದಲಿನಂತೆ ನೀನು ಆಗಲು ಸಾಧ್ಯವಿಲ್ಲ. ನೀನು ಹಿಂಜಾರಿ ಹೋಗಿದ್ದೇಯಾ ಎಂಬ ಅನೇಕ ಬಲಹೀನತೆ, ಆಲೋಚನೆಗಳನ್ನು ತಂದು ಹಾಕಿ ಸೋತು ಹೋಗುವಂತೆ ಮಾಡುತ್ತಾನೆ. "ನನ್ನವನಾಗಿರುವ ನೀತಿವಂತನು ನಂಬಿಕೆಯಿಂದಲೇ ಬದುಕುವನು" (ಇಬ್ರಿ. 10:38). ದೇವ ಮಗುವೆ ನಿನ್ನ ನಂಬಿಕೆಯನ್ನು ಕಳೆದುಕೊಳ್ಳಬೇಡಾ. ಕರ್ತನು ಹೇಳುತ್ತಾನೆ "ನೀನು ಎಲ್ಲಿಂದ ಬಿದ್ದಿದ್ದೀಯೋ ಅದನ್ನು ನಿನ್ನ ನೆನಪಿಗೆ ತಂದುಕೊಂಡು ದೇವರ ಕಡೆಗೆ ತಿರುಗಿಕೊಳ್ಳು" (ಪ್ರಕ. 2:5). ತಂದೆಯೊಂದಿಗಿದ್ದ ಸಂಬಂಧ ತಿರುಗಿ ಕಟ್ಟುವುದಕ್ಕಾಗಿ ಒಪ್ಪಿಸಿಕೊಡು. ಕೆಟ್ಟು ಹೋದ ಮಗನು ತಿರುಗಿ ಹಿಂತಿರುಗಿ ತಂದೆಯ ಬಳಿಗೆ ಮನಸ್ಸು ಮಾಡಿದ ವೇಳೆ ಸೈತಾನನು ಆತನಲ್ಲಿ ಹೇಳಿರಬಹುದು. "ನೀನು ಹಿಂತಿರುಗಿ ತಂದೆಯ ಬಳಿಗೆ ಹೋದರೆ ಆತನು ನಿನ್ನನ್ನು ಸ್ವೀಕರಿಸಲಾರನು. ನೀನು ಹೋಗುವ ನಿರ್ಧಾರ ಕೈಬಿಡು ಎಂದು ಕಿವಿಯಲ್ಲಿ ಹೇಳಿರಬಹುದು, ಆಲೋಚನೆಯನ್ನು ಹುಟ್ಟಿಸಿರಬಹುದು. ಆದರೆ ಆತನು ತಂದೆಯ ಬಳಿಗೆ ಬಂದಾಗ ದೂರದಿಂದಲೇ ತಂದೆ ನೋಡಿ ಎದುರುಗೊಂಡು ಅಪ್ಪಿಕೊಂಡು ಸ್ವಾಗತಿಸಿದನು.

ಮುಂದುವರಿಯುವದು.......

**ಪಾ॥ ರೋನಾಲ್ಡ್ ಮಚಾದೋ**
ಬೇತೇಲ್ ಚರ್ಚ್ ಕಾಮಗೆರೆ.

---

## ಪ್ರಾರ್ಥನಾ ಮನವಿಗಳು

- **ಮಾರ್ಚ್ ತಿಂಗಳಲ್ಲಿ ನಡೆಯುವ ವಾರ್ಷಿಕ ಪರೀಕ್ಷೆಯಲ್ಲಿ ಮಕ್ಕಳು ಉತ್ತಮವಾಗಿ ಬರೆಯಲು ಬೇಕಾದ ಜ್ಞಾನವನ್ನು, ನೆನಪಿನ ಶಕ್ತಿಯನ್ನು, ಆರೋಗ್ಯವನ್ನು, ಧೈರ್ಯವನ್ನು ಕೊಡುವುದಕ್ಕಾಗಿ.**
- **ಮಹಿಳೆಯರ ಮತ್ತು ಮಕ್ಕಳ ಮೇಲೆ ನಡೆಯುತ್ತಿರುವ ಅತ್ಯಾಚಾರಗಳು ನಿಂತುಹೋಗುವುದಕ್ಕಾಗಿ ಪ್ರತಿಯೊಂದು ಮಕ್ಕಳಿಗೆ ದೇವರು ರಕ್ಷಣೆಯನ್ನು ಕೊಡುವುದಕ್ಕಾಗಿ.**
- **ನಮ್ಮ ಭಾರತ ದೇಶದಲ್ಲಿ ನಡೆಯುತ್ತಿರುವ ಎಲ್ಲಾ ಭಯೋತ್ಪಾದನೆಗಳು, ಭ್ರಷ್ಟಾಚಾರ, ಕೊಲೆ, ದರೋಡೆ, ಮೋಸ ವಂಚನೆಗಳು ನೀಗುವಂತೆ ದೇಶದಲ್ಲಿ ಸಮಾಧಾನ ನೆಲೆಸುವಂತೆ.**
- **ನಮ್ಮ ದೇಶದಲ್ಲಿ ಯಾವುದೇ ಅಂಟುರೋಗಗಳು ಹರಡದಂತೆ ವಾತಾವರಣವನ್ನು ಕರ್ತನು ತನ್ನ ನಿಯಂತ್ರಣದಲ್ಲಿಟ್ಟು ನಡೆಸುವುದಕ್ಕಾಗಿ.**

ಭೂಮಿಯು ಮಾರ್ಪಟ್ಟರೂ ಬೆಟ್ಟಗಳು ಸಮುದ್ರದಲ್ಲ ಮುಣುಗಿ ಹೋದರೂ ನಮಗೇನೂ ಭಯವಿಲ್ಲ (ಕೀರ್ತ. 46:2).

## OUR BANK ACCOUNT DETAILS :

**CANARA BANK, Shankarpura Branch. A/c Name : DGMBC Trust**
**A/c. No. 0636101011338 IFSC : CNRB 0000636 Swift : CNRBINBBRFM**

**CORPORATION BANK, Kurkal Branch A/c Name : DGMBC Trust**
**A/c. No. 018900101007084 IFSC : CORP 0000189 Swift : CORPINBB148**

**ICICI BANK, Udupi Branch A/c Name : DGMBC Trust A/c. No. 00720102575**
**Swift : ICICINBBXXX IFSC : ICIC0000072**

## ಓದುಗರಿಗೆ ವಿಶೇಷ ಸೂಚನೆ

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 180/–ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 180/–ನ್ನು ಮನಿಯಾರ್ಡರ್/ಡಿ.ಡಿ. ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಗೆ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
**ಸಂಪಾದಕರು, 'ದೇವರ ಸ್ವರ', ಬೇತೇಲ್ ಚರ್ಚ್, ಯೇಸುಪುರ,**
**ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.**
Email : editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
**ಡಿಜಿಎಂ ಬೇತೇಲ್ ಕಛೇರಿ,**
**ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.**
Ph: (0820) 2589070, 200 2781
E-mial: dgmofficial@gmail.com

# ಮಹಿಳೆಯರ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

"ನನ್ನ ಮಾತಿಗೆ ಕಿವಿಗೊಡುವವನಾದರೋ ಸ್ವಸ್ಥವಾಗಿರುತ್ತಾ ಯಾವ ಕೇಡಿಗೂ ಭಯಪಡದೆ ಸುರಕ್ಷಿತನಾಗಿರುವನು ಎಂಬುದೇ" (ಜ್ಞಾನೋ. 1:33). ದೇವರ ವಾಕ್ಯ ಸ್ಪಷ್ಟವಾಗಿ ಉಪದೇಶಿಸುತ್ತದೆ, "ನೀವು ಕ್ರಿಸ್ತನಂಬಿಕೆಯಿಲ್ಲದವರೊಂದಿಗೆ ಸೇರಿ ಇಜ್ಜೋಡಾಗಬೇಡಿರಿ. ಧರ್ಮಕ್ಕೂ ಅಧರ್ಮಕ್ಕೂ ಜೊತೆಯೇನು? ಬೆಳಕಿಗೂ ಕತ್ತಲೆಗೂ ಐಕ್ಯವೇನು? ಕ್ರಿಸ್ತನಿಗೂ ಸೈತಾನನಿಗೂ ಒಡನಾಟವೇನು? ನಂಬುವವನಿಗೂ ನಂಬದೆ ಇರುವವನಿಗೂ ಪಾಲುಗಾರಿಕೆ ಏನು? ದೇವರ ಮಂದಿರಕ್ಕೂ ವಿಗ್ರಹಗಳಿಗೂ ಒಪ್ಪಿಗೆ ಏನು? ನಾವು ಜೀವಸ್ವರೂಪನಾದ ದೇವರ ಮಂದಿರವಾಗಿದ್ದೇವಲ್ಲಾ. ಇದರ ಸಂಬಂಧವಾಗಿ ದೇವರು ನಾನು ಅವರಲ್ಲಿ ವಾಸಿಸುತ್ತಾ ತಿರುಗಾಡುವೆನು, ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು ಎಂದು ಹೇಳಿದ್ದಾನೆ. ಆದದರಿಂದ ಅನ್ಯಜನರ ಮಧ್ಯದಲ್ಲಿಂದ ಹೊರಟು ಬಂದು ಪ್ರತ್ಯೇಕವಾಗಿರಿ; ಅಶುದ್ಧವಾದ ಯಾವದನ್ನೂ ಮುಟ್ಟದಿರಿ ಎಂದು ಕರ್ತನು ಹೇಳುತ್ತಾನೆ. ಇದಲ್ಲದೆ ನಾನು ನಿಮ್ಮನ್ನು ಸೇರಿಸಿಕೊಂಡು ನಿಮಗೆ ತಂದೆಯಾಗಿರುವೆನು; ನೀವು ನನಗೆ ಕುಮಾರ ಕುಮಾರಿಯರು ಆಗಿರುವಿರೆಂದು ಸರ್ವಶಕ್ತನಾದ ಕರ್ತನು ಹೇಳುತ್ತಾನೆ" (2 ಕೊರಿ. 6:14–18). "ಪ್ರಿಯರೇ, ಈ ವಾಗ್ದಾನಗಳು ನಮಗಿರುವದರಿಂದ ನಾವು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುಚಿಮಾಡಿಕೊಂಡು ದೇವರ ಭಯದಿಂದ ಕೂಡಿದವರಾಗಿ ಪವಿತ್ರತ್ವವನ್ನು ಸಿದ್ಧಿಗೆ ತರುವದಕ್ಕೆ ಪ್ರಯತ್ನಿಸೋಣ" (2 ಕೊರಿ. 7:1). ರಕ್ಷಣೆ ಹೊಂದಿದ ಪ್ರತಿ ವ್ಯಕ್ತಿಯ ಒಳಗಡೆ ಪರಿಶುದ್ಧಾತ್ಮನು ಹಾಗೂ ಕರ್ತನಾದ ಯೇಸುಕ್ರಿಸ್ತನು ವಾಸಮಾಡುತ್ತಾನೆ. ರಕ್ಷಣೆ ಹೊಂದದ ವ್ಯಕ್ತಿಯ ಒಳಗಡೆ ಯಾರಿರುತ್ತಾರೆಂದು ದೇವರ ವಾಕ್ಯ ಸ್ಪಷ್ಟವಾಗಿ ತಿಳಿಸುತ್ತದೆ. "ದೇವರ ಮಂದಿರಕ್ಕೂ ವಿಗ್ರಹಗಳಿಗೂ ಒಪ್ಪಿಗೆ ಏನು?" (2 ಕೊರಿ. 6:16). "ನೀವು ಪೂರ್ವದಲ್ಲಿ ಅಪರಾಧಗಳನ್ನೂ ಪಾಪಗಳನ್ನೂ ಮಾಡುವವರಾಗಿದ್ದು ಇಹಲೋಕಾಚಾರಕ್ಕೆ ಅನುಸಾರವಾಗಿ ನಡೆದುಕೊಂಡಿರಿ; ವಾಯುಮಂಡಲದಲ್ಲಿ ಅಧಿಕಾರನಡಿಸುವ ಅಧಿಪತಿಗೆ, ಅಂದರೆ ನಂಬಲೊಲ್ಲದವರನ್ನು ಅವಿಧೇಯತೆಗೆ ಈಗ ಪ್ರೇರೇಪಿಸುವ ಆತ್ಮನಿಗೆ ಅನುಸಾರವಾಗಿ ನಡೆದುಕೊಂಡಿರಿ" (ಎಫೆ. 2:2). ರಕ್ಷಣೆ ಹೊಂದಿದವರ ಒಳಗಡೆ ಪರಿಶುದ್ಧಾತ್ಮನು ಇರುತ್ತಾನೆ. ರಕ್ಷಣೆ ಹೊಂದದವರ ಒಳಗಡೆ ಇನ್ನೊಂದು ಆತ್ಮ ಇರುತ್ತಾನೆಂದು ದೇವರ ವಾಕ್ಯದ ಮೂಲಕವಾಗಿ ತಿಳಿದುಕೊಳ್ಳಬಹುದು.

**ಸತ್ಯವೇದದಲ್ಲಿ ಮದುವೆಗೆ ಸಂಬಂಧವಾಗಿರುವ ಉಪದೇಶಗಳು:**

1) ಕ್ರೈಸ್ತ ವಿಶ್ವಾಸಿ ಅನ್ಯರನ್ನು ಮದುವೆಮಾಡಿಕೊಳ್ಳಬಾರದು.
2) ಕ್ರೈಸ್ತ ವಿಶ್ವಾಸಿಗಳು ಪ್ರೀತಿಸಿ ಮದುವೆಯಾಗಬಾರದು.
3) ಕ್ರೈಸ್ತ ವಿಶ್ವಾಸಿಗಳು ಒಂದೇ ಜಾತಿಯ ಲಿಂಗದವರೊಟ್ಟಿಗೆ ಮದುವೆಯಾಗಬಹುದು.
4) ಕ್ರೈಸ್ತ ವಿಶ್ವಾಸಿಗಳು ವಿವಾಹ ವಿಚ್ಛೇದನಾ ಮಾಡಬಾರದು.
5) ಕ್ರೈಸ್ತ ವಿಶ್ವಾಸಿಗಳು ವಿವಾಹ ವಿಚ್ಛೇದಿತರನ್ನು ಮದುವೆಯಾಗಬಾರದು.
6) ಕ್ರೈಸ್ತ ವಿಶ್ವಾಸಿಗಳು ಮದುವೆಯ ಹೊರಗೆ ಅಕ್ರಮ ಸಂಬಂಧ ಇಟ್ಟುಕೊಳ್ಳಬಾರದು.
7) ಕ್ರೈಸ್ತ ವಿಶ್ವಾಸಿಗಳು ಆಸ್ತಿಗಾಗಿ, ಹಣಕ್ಕಾಗಿ, ವರದಕ್ಷಿಣೆಗಾಗಿ ಮದುವೆ ಮಾಡಿಕೊಳ್ಳಬಾರದು.
8) ಕ್ರೈಸ್ತ ವಿಶ್ವಾಸಿಗಳು ತಾನು ರಕ್ಷಣೆ ಹೊಂದಿ ಬಿಟ್ಟು ಬಂದ ಜಾತಿಯ ಹಿನ್ನಲೆಯ ಹುಡುಗ, ಹುಡಗಿಬೇಕೆಂದು ಹಟಮಾಡಬಾರದು.
9) ಕ್ರೈಸ್ತ ವಿಶ್ವಾಸಿಗಳು ಮದುವೆಗಿಂತ ಮುಂಚೆ ಪರಸ್ಪರ ದೈಹಿಕ ಸಂಬಂಧ ಬೆಳೆಸಬಾರದು.
10) ಕ್ರೈಸ್ತ ವಿಶ್ವಾಸಿಯು ಒಂದಕ್ಕಿಂತ ಹೆಚ್ಚು ಮದುವೆಗಳನ್ನು ಮಾಡಿಕೊಳ್ಳಬಾರದು.

1) **ಕ್ರೈಸ್ತ ವಿಶ್ವಾಸಿ ಅನ್ಯರನ್ನು ಮದುವೆ ಮಾಡಿಕೊಳ್ಳಬಾರದು** : "ಜ್ಞಾನವಂತೆಯು ತನ್ನ ಮನೆಯನ್ನು ಕಟ್ಟಿಕೊಳ್ಳುವಳು; ಜ್ಞಾನಹೀನಳು ತನ್ನ ಸ್ವಂತ ಕೈಯಿಂದ ಮುರಿದುಬಿಡುವಳು" (ಜ್ಞಾನೋ. 14:1). ಮದುವೆ ಎಂಬುವಂಥದ್ದು ಅದು ಪರಲೋಕದ ದೇವರಿಂದ ಸ್ಥಾಪಿತವಾದಂತಹ ಪರಿಶುದ್ಧವಾದ ಸಂಸ್ಕಾರವಾಗಿದೆ. ನಮ್ಮ ಮನೆಯನ್ನು ಕಟ್ಟುವಂತಹ (ಕುಟುಂಬ ಜೀವಿತವನ್ನು) ಜ್ಞಾನವನ್ನು ಪರಲೋಕದ ದೇವರಿಂದ ಪ್ರಾರ್ಥಿಸಿ ಪಡಕೊಳ್ಳಬೇಕು. "ಕಂದಾ, ನನ್ನ ಮಾತುಗಳನ್ನು ಅಂಗೀಕರಿಸಿ ನನ್ನ ವಿಧಿಗಳನ್ನು ನಿಧಿಯಂತೆ ಕಾಪಾಡಿಕೋ, ನಿನ್ನ ಕಿವಿಯನ್ನು ಜ್ಞಾನದ ಕಡೆಗೂ ಹೃದಯವನ್ನು ವಿವೇಕದ ಕಡೆಗೂ ತಿರುಗಿಸು; ಬುದ್ಧಿಗಾಗಿ ಮೊರೆಯಿಟ್ಟು ವಿವೇಕಕ್ಕಾಗಿ

ಕೂಗಿಕೊಂಡು ಅದನ್ನು ಬೆಳ್ಳಿಯಂತೆಯೂ ನಿಕ್ಷೇಪದಂತೆಯೂ ಹುಡುಕು; ಆಗ ನೀನು ಯೆಹೋವನ ಭಯವನ್ನು ಅರಿತು ದೈವಜ್ಞಾನವನ್ನು ಪಡೆದುಕೊಳ್ಳುವಿ. ಯೆಹೋವನೇ ಜ್ಞಾನವನ್ನು ಕೊಡುವಾತನು. ಆತನ ಬಾಯಿಯಿಂದಲೇ ತಿಳುವಳಿಕೆಯೂ ವಿವೇಕವೂ ಹೊರಟು ಬರುತ್ತವೆ. ಆತನು ಯಥಾರ್ಥ ಚಿತ್ತರಿಗಾಗಿ ಸುಜ್ಞಾನವನ್ನು ಕೂಡಿಸಿಡುವನು" (ಜ್ಞಾನೋ. 2:1–7). "ದೇವರು ತಾನು ಮೆಚ್ಚಿದವನಿಗೆ ಜ್ಞಾನವನ್ನೂ ತಿಳುವಳಿಕೆಯನ್ನೂ ಸಂತೋಷವನ್ನೂ ದಯಪಾಲಿಸುತ್ತಾನಲ್ಲವೆ" (ಪ್ರಸ. 2:26). ಹಾಗಾದರೆ ಕ್ರೈಸ್ತ ವಿಶ್ವಾಸಿಯಾದ ನೀನು ನಿನ್ನ ಭವಿಷ್ಯದಲ್ಲಿ ಒಂದು ಸುಂದರವಾದ ಕುಟುಂಬ ಜೀವಿತವನ್ನು ಆರಂಭಿಸಲು ಇಷ್ಟ ಪಡುವುದಾದರೆ ಪ್ರಧಾನವಾದ ಮೂರು ಸಂಗತಿಗಳನ್ನು ನೀನು ಮಾಡಬೇಕು.

1) ನಿನ್ನ ಮದುವೆಯಾಗಲಿರುವ ಸಂಗಾತಿಗಾಗಿ ಕರ್ತನಲ್ಲಿ ಪ್ರಾರ್ಥಿಸು

2) ದೇವರ ವಚನಪ್ರಕಾರ (ದೇವರ ಇಷ್ಟ ಪ್ರಕಾರವಾಗಿ) ಮಾತ್ರ ನಾನು ಮದುವೆಯಾಗುತ್ತೇನೆಂದು ತೀರ್ಮಾನಿಸು.

3) ದಾಂಪತ್ಯ ಜೀವಿತವನ್ನು ನಡೆಸುವ ಜ್ಞಾನವನ್ನು ಕರ್ತನ ಬಳಿಯಲ್ಲಿ ಕೇಳಿ ಹೊಂದಿಕೊ.

1) **ನಿನ್ನ ಮದುವೆಯಾಗಲಿರುವ ಸಂಗಾತಿಗಾಗಿ ಪ್ರಾರ್ಥಿಸು:** "ಅವನು ಸಂಜೆ ವೇಳೆಯಲ್ಲಿ ಧ್ಯಾನ ಮಾಡುವುದಕೋಸ್ಕರ ಅಡವಿಗೆ ಹೋಗಿದ್ದಾಗ ಕಣ್ಣೆತ್ತಿ ನೋಡಲಾಗಿ ಒಂಟೆಗಳು ಬರುವುದನ್ನು ಕಂಡನು" (ಆದಿ. 24:63). ಅಬ್ರಹಾಮನ ಮಗನಾದ ಇಸಾಕನನ್ನು ಮದುವೆಯಾಗುವುದಕ್ಕಾಗಿ ಹುಡುಗಿ ನೋಡಲು ಅಬ್ರಹಾಮನು ತನ್ನ ಮನೆಯ ಹಿರಿ ಕೆಲಸದವನಾದ ಎಲಿಯೇಜರನನ್ನು ತನ್ನ ಸ್ವಂತ ಊರಿಗೆ ಕಳುಹಿಸಿದನು. ಅದರ ನಂತರ ಇಸಾಕನು ಧ್ಯಾನಿಸಿದನು ಎಂದು ಓದುತ್ತೇವೆ. ಇಸಾಕನು ಪ್ರಾರ್ಥಿಸುವಾಗ ತನ್ನ ಮದುವೆಗಾಗಿ ಪ್ರಾರ್ಥಿಸಿರಬಹುದು. ಕರ್ತನು ಅವನ ಪ್ರಾರ್ಥನೆ ಕೇಳಿ ಎಲಿಯೇಜರನು ಹೋದಂತಹ ಕಾರ್ಯವನ್ನು ಸಫಲಪಡಿಸಿದನು. "ಇಸಾಕನು ಆಕೆಯನ್ನು ತಾಯಿಯಾದ ಸಾರಳ ಗುಡಾರಕ್ಕೆ ಕರೆದುಕೊಂಡು ಹೋದನು. ಈ ರೀತಿಯಾಗಿ ಅವನು ರೆಬೆಕ್ಕಳನ್ನು ವರಿಸಿದನು. ಆಕೆ ಅವನ ಹೆಂಡತಿಯಾದಳು ಅವನು ಆಕೆಯನ್ನು ಪ್ರೀತಿಸಿ ತನ್ನ ತಾಯಿ ಸತ್ತ ದು:ಖವನ್ನು ಶಮನಮಾಡಿಕೊಂಡನು" (ಆದಿ. 24:67). ನನ್ನನ್ನು ನೋಡಲು ನನ್ನ ಪತಿಯವರು ಮೈಸೂರಿಗೆ ಬಂದಿದ್ದಾಗ 3 ದಿನ ಸಂಪೂರ್ಣ ಉಪವಾಸದಿಂದಿದ್ದರು. ಅದೇ ರೀತಿ ನಾನು ಕೂಡ ಉಪವಾಸದಿಂದ ಪ್ರಾರ್ಥಿಸುತ್ತಿದ್ದೆ ಎಂದು ನಂತರ ನನ್ನ ಪತಿಯವರಿಗೆ ಗೊತ್ತಾಯಿತು. ಅನೇಕರು ನಾನು ಮದುವೆಯಾಗುವಂಥ ಹುಡುಗಿಗೆ, ಹುಡುಗನಿಗೆ ಒಳ್ಳೇ ಕೆಲಸ ಇರಬೇಕು, ಅವನಿಗೆ ಸ್ವಂತ ವಾಹನ, ಮನೆ ಎಲ್ಲಾ ಇರಬೇಕು ಎಂದೆಲ್ಲಾ ಬಯಸಿ ಪ್ರಾರ್ಥಿಸುತ್ತಾರೆ. ಇದರಿಂದಾಗಿ ಮದುವೆಯ ನಂತರ ತೃಪ್ತಿಕರವಾದ ದಾಂಪತ್ಯ ಜೀವಿತವನ್ನು ನಡೆಸಲು ಅವರಿಗೆ ಸಾಧ್ಯವಾಗುವುದಿಲ್ಲ. ನಿನ್ನ ಪ್ರಾರ್ಥನೆ ಇದಾಗಿರಬೇಕು.

1) ನಾನು ಮದುವೆಯಾಗುವಂಥ ಹುಡುಗಿ/ಹುಡುಗ ರಕ್ಷಣೆ ಹೊಂದಿರಬೇಕು.

2) ನಾನು ಮದುವೆಯಾಗುವಂಥ ಹುಡುಗ/ಹುಡುಗಿ ದೇವರ ಚಿತ್ತದ್ದಾಗಿರಬೇಕು.

3) ನಾನು ಮದುವೆಯಾಗುವಂಥ ಹುಡುಗ/ಹುಡುಗಿ ದೇವರಲ್ಲಿ ಹೆಚ್ಚಾಗಿ ಭಯಭಕ್ತಿಯುಳ್ಳವರಾಗಿರಬೇಕು

4) ನಾನು ಮದುವೆಯಾಗುವಂಥ ಹುಡುಗ/ಹುಡುಗಿ ದೇವರನ್ನು ಎಲ್ಲಕ್ಕಿಂತಲೂ ಹೆಚ್ಚು ಪ್ರೀತಿ ಮಾಡಬೇಕು

5) ನಾನು ಮದುವೆಯಾಗುವಂಥ ಹುಡುಗ/ಹುಡುಗಿ ಆತ್ಮೀಕವಾದ ಸ್ವಭಾವ, ಒಳ್ಳೇ ಗುಣಗಳುಳ್ಳವರಾಗಿರಬೇಕು

6) ನಾನು ಮದುವೆಯಾಗುವಂಥ ಹುಡುಗ/ಹುಡುಗಿ ದೇವರ ಚಿತ್ತ ಪ್ರಕಾರ ಜೀವಿಸುವವರಾಗಿರಬೇಕು

7) ನನ್ನ ಮದುವೆಯು ದೇವರಿಗೆ ಮಹಿಮೆಯನ್ನು ತರಬೇಕು ಹೀಗೆ ನೀನು ಪ್ರಾರ್ಥಿಸಿದರೆ ದೇವರು ಖಂಡಿತವಾಗಿ ಆಶೀರ್ವಾದಿಸುತ್ತಾನೆ.

2) **ದೇವರ ವಚನ ಪ್ರಕಾರ (ಇಷ್ಟ ಪ್ರಕಾರ) ಮಾತ್ರ ಮದುವೆಯಾಗುತ್ತೇನೆಂದು ತೀರ್ಮಾನಿಸು** :– ಧರ್ಮೋ. 7:3–4 ರಲ್ಲಿ ದೇವರು ಇಸ್ರಾಯೇಲರಿಗೆ ಅನ್ಯರನ್ನು ಮದುವೆಯಾಗಲೇ ಬಾರದೆಂದು ಆಜ್ಞಾಪಿಸಿದನು. ಆದರೂ ಅನೇಕರು ದೇವರ ಮಾತಿಗೆ ಅವಿಧೇಯರಾಗಿ ಮದುವೆಯಾದರು. ಆದರಿಂದಾಗಿ ಅವರ ಜೀವಿತದಲ್ಲಿ ಅನೇಕ ಸಮಸ್ಯೆಗಳನ್ನು ಬರಮಾಡಿಕೊಂಡರು. ಅರಸನಾದ ಸೊಲೊಮೋನನ ಬಗ್ಗೆ ನಾವು ತಿಳಿಯುತ್ತೇವೆ ದೇವರು

ಯೆಹೋವನು ನಿನ್ನ ಭರವಸಕ್ಕೆ ಆಧಾರನಾಗಿದ್ದು ನಿನ್ನ ಕಾಲು ಪಾಶಕ್ಕೆ
ಸಿಕ್ಕದಂತೆ ನಿನ್ನನ್ನು ಕಾಪಾಡುವನು (ಜ್ಞಾನೋ. 3:26).

ಆತ್ಮೀಕ ಆಶೀರ್ವಾದಗಳಿಂದ ಅವನನ್ನು ತುಂಬಿಸಿದನು. ಆದರೆ ದೇವರ ಎಚ್ಚರಿಕೆಯನ್ನು ಕಡೆಗಾಣಿಸಿ ದೇವರ ವಾಕ್ಯಕ್ಕೆ ಅವಿಧೇಯನಾಗಿ ಅನ್ಯ ಸ್ತ್ರೀಯರನ್ನು ಮದುವೆಯಾದನು. ಇದು ದೇವರ ದೃಷ್ಟಿಯಲ್ಲಿ ಘೋರವಾದ ಅಪರಾಧವಾಗಿತ್ತು. ದೇವರು ಎರಡು ಸಲ ಕನಸಿನಲ್ಲಿ ಸೊಲೊಮೋನನಿಗೆ ಕಾಣಿಸಿಕೊಂಡು ಎಚ್ಚರಿಸಿದರೂ ದೇವರ ಆಜ್ಞೆಯನ್ನು ಸೊಲೊಮೋನನು ಮೀರಿದನೆಂದು ನಾವು ನೋಡುತ್ತೇವೆ (1 ಅರಸು.11:1–11). ನೆಹೆಮೀಯನು ಯೆರೂಸಲೇಮನ್ನು ಕಟ್ಟಲು ಬಾಬೆಲಿನಿಂದ ಬಂದಾಗ ಸೊಲೊಮೋನನ ಘಟನೆಯನ್ನು ನೆನಪಿಸುವುದನ್ನು ಕಾಣಬಹುದು. “ಅದೇ ಕಾಲದಲ್ಲಿ ಅಷ್ಡೋದ್, ಅಮ್ಮೋನಿಯ, ಮೋವಾಬ್ ಸ್ತ್ರೀಯರನ್ನು ಮದುವೆ ಮಾಡಿಕೊಂಡ ಯೆಹೂದ್ಯರನ್ನು ಕುರಿತು ವಿಚಾರಮಾಡಿ ಅವರ ಮಕ್ಕಳಲ್ಲಿ ಅರ್ಧ ಮಂದಿ ಯೂದಾಯ ಭಾಷೆಯಲ್ಲಿ ಮಾತಾಡಲರಿಯದೆ ಅಷ್ಡೋದ್ಯ ಮುಂತಾದ ಜನರ ಭಾಷೆಯನ್ನಾಡುತ್ತಾರೆಂದು ತಿಳಿಯಲು ಕೋಪಗೊಂಡು ಅವರನ್ನು ಶಪಿಸಿ ಅವರಲ್ಲಿ ಕೆಲವರನ್ನು ಹೊಡೆದು ಅವರ ಕೂದಲುಗಳನ್ನು ಕಿತ್ತು ಅಂಥ ಸ್ತ್ರೀಯರ ದೆಸೆಯಿಂದ ಇಸ್ರಾಯೇಲ್ ರಾಜನಾದ ಸೊಲೊಮೋನನು ದೋಷಿಯಾದನಲ್ಲವೇ. ಅನೇಕಾನೇಕ ಜನಾಂಗಗಳಲ್ಲಿ ಅವನಿಗೆ ಸಮಾನನಾದ ಅರಸನು ಇರಲಿಲ್ಲ; ಅವನು ತನ್ನ ದೇವರಿಗೆ ವಿಶೇಷ ಪ್ರಿಯನು; ಆದದರಿಂದ ದೇವರು ಅವನನ್ನು ಎಲ್ಲಾ ಇಸ್ರಾಯೇಲ್ಯರ ಮೇಲೆ ಅರಸನನ್ನಾಗಿ ನೇಮಿಸಿದನು. ಆದರೂ ಅನ್ಯದೇಶ ಸ್ತ್ರೀಯರು ಅವನನ್ನು ಪಾಪದಲ್ಲಿ ಬೀಳಿಸಿದರು. ಹೀಗಿರಲಾಗಿ ನೀವು ಅನ್ಯ ಸ್ತ್ರೀಯರನ್ನು ಮದುವೆ ಮಾಡಿಕೊಂಡು ಅದೇ ಘೋರವಾದ ದುಷ್ಟತ್ವವನ್ನು ನಡೆಸಿ ದೇವರಿಗೆ ದ್ರೋಹಿಗಳಾಗುವದನ್ನು ನಾವು ಒಪ್ಪಿಕೊಳ್ಳಬೇಕೋ ಎಂದು ಅವರನ್ನು ಗದರಿಸಿ ಅವರಿಂದ ಅನ್ಯರ ಮಕ್ಕಳಿಗೆ ಹೆಣ್ಣು ಕೊಡಬಾರದು, ನಿಮಗಾಗಲಿ ನಿಮ್ಮ ಮಕ್ಕಳಿಗಾಗಲಿ ಅವರಿಂದ ತರಲೂ ಬಾರದು ಎಂಬ ಧರ್ಮವಿಧಿಯನ್ನು ಕೈಗೊಳ್ಳುವದಾಗಿ ದೇವರ ಹೆಸರಿನಲ್ಲಿ ಪ್ರಮಾಣ ಮಾಡಿಸಿದೆನು” (ನೆಹೆ. 13:23–**27**).

**1) ಕ್ರೈಸ್ತ ವಿಶ್ವಾಸಿಗಳು ಅನ್ಯರನ್ನು ಯಾಕೆ ಮದುವೆಯಾಗಬಾರದು** :– ಕ್ರೈಸ್ತ ವಿಶ್ವಾಸಿಗಳು ರಕ್ಷಣೆ ಹೊಂದಿದ್ದರಿಂದ ಅವರೊಳಗೆ ಪರಿಶುದ್ಧಾತ್ಮನು ವಾಸಿಸುತ್ತಾನೆ ದೇವರಾತ್ಮನು “ಕರ್ತನ ಸಂಸರ್ಗದಲ್ಲಿರುವವನಾದರೋ ಆತನೊಂದಿಗೆ ಒಂದೇ ಆತ್ಮವಾಗಿದ್ದಾನೆ” (1 ಕೊರಿ. 6:17).

ಆದಕಾರಣ ನಮ್ಮ ದೇಹವೆಂಬ ಕರ್ತನ ಆಲಯವನ್ನು ಅಶುದ್ಧಗೊಳಿಸಬಾರದು.

2) ಕರ್ತನ ಆಜ್ಞೆಯಾಗಿದೆ. “ನಿಮ್ಮ ಎದುರಿನಿಂದ ಹೊರಡಿಸುವವನಾಗಿ ಅವರನ್ನು ನಿಮ್ಮಿಂದ ಪರಾಜಯಪಡಿಸುವಾಗ ನೀವು ಅವರನ್ನು ನಿಶ್ಶೇಷವಾಗಿ ಸಂಹರಿಸಬೇಕು. ಅವರ ಸಂಗಡ ಒಡಂಬಡಿಕೆ ಮಾಡಿಕೊಳ್ಳಬಾರದು, ಅವರನ್ನು ಕನಿಕರಿಸಬಾರದು. ಅವರೊಡನೆ ಬೀಗತನಮಾಡಬಾರದು; ಅವರ ಮಕ್ಕಳಿಗೆ ಹೆಣ್ಣುಗಳನ್ನು ಕೊಡಲೂಬಾರದು. ಅವರಿಂದ ತರಲೂ ಬಾರದು” (ಧರ್ಮೋ. 7:2).

3) ದೇವ ಜನರು ದೇವರ ಸೇವೆಯಿಂದ ತಪ್ಪಿ ಹೋಗುವವರಾದ ಕಾರಣ “ಅವರೊಡನೆ ಬೀಗತನ ಮಾಡಬಾರದು; ಅವರ ಮಕ್ಕಳಿಗೆ ಹೆಣ್ಣುಗಳನ್ನು ಕೊಡಲೂಬಾರದು. ಅವರಿಂದ ತರಲೂ ಬಾರದು. ಹಾಗೆ ಮಾಡಿದರೆ ಅವರು ನಿಮ್ಮ ಮಕ್ಕಳನ್ನು ಯೆಹೋವನ ಸೇವೆಯಿಂದ ತಪ್ಪಿಸಿ ಇತರ ದೇವರುಗಳನ್ನು ಪೂಜಿಸುವದಕ್ಕೆ ತಿರುಗಿಸಾರು; ಆಗ ಯೆಹೋವನು ನಿಮ್ಮ ಮೇಲೆ ಕೋಪಗೊಂಡು ಬೇಗನೆ ನಿಮ್ಮನ್ನು ನಾಶಮಾಡುವನು” (ಧರ್ಮೋ. 7:3–4). “ಅದಲ್ಲದೆ ನೀವು ನಿಮ್ಮ ಗಂಡು ಮಕ್ಕಳಿಗೆ ಅವರಲ್ಲಿ ಕನ್ನಿಕೆಗಳನ್ನು ತೆಗೆದುಕೊಳ್ಳುವದಕ್ಕೆ ಅಸ್ಪದವುಂಟಾಗುವದು; ತರುವಾಯ ಆ ಸೊಸೆಯರು ತೌರ ಮನೆಯ ದೇವತೆಗಳನ್ನು ಪೂಜಿಸುವವರಾಗಿ ನಿಮ್ಮ ಮಕ್ಕಳನ್ನೂ ಅನ್ಯದೇವರುಗಳ ಪೂಜೆ ಎಂಬ ವ್ಯಭಿಚಾರಕ್ಕೆ ಎಳೆದಾರು, ಎಚ್ಚರ”. (ವಿಮೋ. 34:16).

**ಮುಂದುವರಿಯುವದು**.........

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ1ದಾಸಿಯಾದ,

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

ನಾನು ನಿನ್ನನ್ನು ಪ್ರೀತಿಸಿರುವದು ಶಾಶ್ವತ ಪ್ರೇಮದಿಂದಲೇ;
ಆದಕಾರಣ ನಿನ್ನನ್ನು ಮಮತೆಯಿಂದ ಸೆಳೆದುಕೊಂಡಿದ್ದೇನೆ (ಯೆರೆ. 31:3).



## ಮಕ್ಕಳ ಸ್ವರ

1) ಬೆಂಕಿಯ ಮುಂದೆ ಯಾವುದು ಕರಗಿ ಲಯವಾಗಿ ಹೋಗುತ್ತದೆ? (ಕೀರ್ತ. 68:2).

2) ನೀತಿವಂತರು ದೇವರ ಸನ್ನಿಧಿಯಲ್ಲಿ ಏನು ಮಾಡುತ್ತಾರೆ? (ಕೀರ್ತ. 68:3).

3) ಪಾರಿವಾಳದ ರೆಕ್ಕೆಗಳು ಯಾವುದರಿಂದ ಥಳಥಳಿಸುತ್ತವೆ? (ಕೀರ್ತ. 68:13).

4) ಸರ್ವಶಕ್ತನು ರಾಜರನ್ನು ಚದರಿಸಿದಾಗ ಸಲ್ಮೋನಿನ ಮೇಲೆ ಏನು ಬಿದ್ದಿತು ?(ಕೀರ್ತ. 68:14).

5) ಬಾಷಾನಿನ ಪರ್ವತವು ಏನಾಗಿದೆ? (ಕೀರ್ತ. 68:15).

6) ಸೆರೆಯಲ್ಲಿರುವವರನ್ನು ಬಿಡಿಸಿ ಅವರನ್ನು ಎಲ್ಲಿಗೆ ತರುತ್ತಾನೆ? (ಕೀರ್ತ. 68:6).

7) ಆತನ ಕಾರ್ಯವು ______________ (ಕೀರ್ತ. 111:3).

8) ಆತನ ನೀತಿಯು ____________ ಇರುವದು (ಕೀರ್ತ. 111:3).

9) ತನ್ನಲ್ಲಿ ಭಯಭಕ್ತಿಯುಳ್ಳವರಿಗೆ ಏನನ್ನು ಕೊಟ್ಟಿದ್ದಾನೆ? (ಕೀರ್ತ. 111:5).

10) ಯೆಹೋವನು ತನ್ನ ಜನರಿಗೆ ಏನನ್ನು ಉಂಟುಮಾಡಿದ್ದಾನೆ? (ಕೀರ್ತ. 111:9).

---

**ಫೆಬ್ರವರಿ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :–**

---

) ಜ್ಞಾನವಿವೇಕದಾಯಕ ಆತ್ಮ (ಯೆಶಾ. 11:2)

2) ಚರ್ಮದ ಅಂಗಿಗಳನ್ನು (ಆದಿ. 3:21).

3) ಮೋಡವು (1 ಅರಸು. 18:44).

4) ಅಂಗೈಗಳಲ್ಲಿ (ಯೆಶಾ. 49:15).

5) ದುಷ್ಟರು (1 ಸಮು. 2:9).

6) ಅಂಧಕಾರದ (ಕೊಲೊ. 1:13).

7) ಅಕ್ಕನ ಮೇಲೆ (ಆದಿ. 30:1).

8) ಐವತ್ತು ಮೊಳ (ಆದಿ. 6:15).

9) ಅಗಾಧವಿಷಯಗಳನ್ನು (ಯೋಬ. 12:22).

**ಜಾಹಿರಾತು**

"ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು" (ಮತ್ತಾ. 25:34–36).

**ಪ್ರತಿ ತಿಂಗಳು ವಿಶ್ವಾಸದಮನೆ ಅನಾಥಾಶ್ರಮಕ್ಕೆ ಅಕ್ಕಿ 25 ಕಿಲೋ. ದಿಂದ ಎಷ್ಟು ಸಾಧ್ಯವಿರುತ್ತದೋ ಅಷ್ಟು. ಅಕ್ಕಿಯನ್ನು ಕೊಡಬಯಸುವವರು ನಮಗೆ ಬೇಕಾಗಿದ್ದಾರೆ. ನೀವು ಕೊಡುವ ಅಕ್ಕಿಯಲ್ಲಿ ಕೆಲವರು ಊಟಮಾಡಿ ತೃಪ್ತರಾದಾಗ ಕರ್ತನು ಪರಲೋಕದಿಂದ ನಿಮ್ಮನ್ನು ಆಶೀರ್ವಾದ ಮಾಡುತ್ತಾನೆ.**

ನೀನು ನನಗೆ ಸಹಾಯಕನಾಗಿದ್ದೀಯಲ್ಲಾ; ನಿನ್ನ ರೆಕ್ಕೆಗಳ ಮರೆಯಲ್ಲಿ ಸುರಕ್ಷಿತನಾಗಿದ್ದುಕೊಂಡು ಆನಂದಘೋಷ ಮಾಡುತ್ತಿರುವೆನು (ಕೀರ್ತ. 63:7).